ಡಾ॥ ಬೆಟಗೇರಿ ಕೃಷ್ಣಶರ್ಮ

ವ್ಯಕ್ತಿ ಪರಿಚಯ



ಡಾ. ರಾಜಶೇಖರ ಇಚ್ಚಂಗಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ-೨೮

ಡಾ. ಬೆಟಗೇರಿ ಕೃಷ್ಣಶರ್ಮ

ವ್ಯಕ್ತಿ ಪರಿಚಯ

ಡಾ॥ ರಾಜಶೇಖರ ಇಚ್ಚಂಗಿ
ಚೈತ್ರ, ವಿವೇಕಾನಂದನಗರ, ಹುಕ್ಕೇರಿ-೫೯೧ ೩೦೯
ಬೆಳಗಾವಿ ಜಿಲ್ಲೆ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

Dr. BETAGERI KRISHNA SHARMA- A Pen Portrait- By **Dr. Rajashekar Ichchangi.** Pulished by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054, Phone : 080-23605033. Janapaḍa Loka : 7201143.

ಪ್ರಥಮ ಮುದ್ರಣ : ೨೦೦೮ ಪುಟಗಳು : ೩೨

ಪ್ರತಿಗಳು : ೨೦೦೦

ಬೆಲೆ : **ರೂ. ೧೦** (ಹತ್ತು ರೂಪಾಯಿ)

ಮುದ್ರಕರು :

ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು–೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ-ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಖ್ಯಾತ ಲೇಖಕರಾದ ಡಾ. ರಾಜಶೇಖರ ಇಚ್ಚಂಗಿ ಅವರು **ಡಾ. ಬೆಟಗೇರಿ ಕೃಷ್ಣಶರ್ಮ** ಅವರನ್ನು ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

೩೦-೭-೨೦೦೮
ಬೆಂಗಳೂರು

ಡಾ. ಬೆಟಗೇರಿ ಕೃಷ್ಣಶರ್ಮ

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ, ಕನ್ನಡ ನವೋದಯ ಸಂದರ್ಭದಲ್ಲಿ ಪ್ರಾಚೀನ ಕರ್ನಾಟಕದ ಗತವೈಭವವನ್ನು ಸ್ಮರಿಸಿಕೊಳ್ಳುವ ಪ್ರಕ್ರಿಯೆ ಒಂದೆಡೆ ಬೆಳೆದು ಬಂದರೆ, ಜನಪದ ಸಾಹಿತ್ಯ-ಸಂಸ್ಕೃತಿಗಳನ್ನು ಶೋಧಿಸಿ ಅವುಗಳ ಮಹತ್ವವನ್ನು ಪ್ರಚಾರಗೊಳಿಸುವುದು ಮತ್ತೊಂದು ಬಗೆಯ ಕಾರ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದಲ್ಲಿ ಮೊದಲು ಜನಪದ ಸಾಹಿತ್ಯ ಸಂಗ್ರಹ ಹಾಗೂ ಪ್ರಚಾರಕಾರ್ಯ ಕೈಗೊಂಡವರಲ್ಲಿ ಡಾ. ಬೆಟಗೇರಿ ಕೃಷ್ಣಶರ್ಮರು ಪ್ರಮುಖರು.

ಬಾಲ್ಯ-ಶಿಕ್ಷಣ-ಉದ್ಯೋಗ

ಇವರು ಹುಟ್ಟಿದ್ದು ಹಳ್ಳಿಯ ಸಂಪ್ರದಾಯವಂತರ ಮನೆತನದಲ್ಲಿ, ದಿನಾಂಕ : ೧೬-೪-೧೯೦೦ ರಂದು, ಗೋಕಾಕ್ ತಾಲ್ಲೂಕಿನ ಬೆಟಗೇರಿ ಗ್ರಾಮದಲ್ಲಿ. ತಂದೆ ಶ್ರೀನಿವಾಸರಾವ್, ತಾಯಿ ರಾಧಾಬಾಯಿ. ಇವರಿಗೆ ಹಿರಿಯರು ಇಟ್ಟ ತೊಟ್ಟಿಲ ಹೆಸರು 'ಕೃಷ್ಣ', ಮನೆಯವರು ಪ್ರೀತಿಯಿಂದ ಕರೆಯುತ್ತಿದ್ದ ಹೆಸರು 'ಈಶ'.

ತಾಯಿಯ ಸಾಹಿತ್ಯ ಪ್ರೇಮ, ತಂದೆಯ ಸಂಗೀತ ಜ್ಞಾನ, ಮನೆಯಲ್ಲಿ, ಊರಿನಲ್ಲಿ ಹಾಗೂ ಸುತ್ತ ಮುತ್ತಲ ಹಳ್ಳಿಗಳಲ್ಲಿ ನಡೆಯುತ್ತಿದ್ದ ಪೂಜೆ ಪುರಸ್ಕಾರ, ಹಾಡು ಕೀರ್ತನೆ, ಕೋಲಾಟ, ಬಯಲಾಟ, ಲಾವಣಿ ಪದಗಳು, ಕಣಿ ಮೇಳಗಳು, ಸೋಗಿನ ವೇಷಗಳು ಬಾಲಕ ಕೃಷ್ಣಶರ್ಮರ ಮೇಲೆ ಅಗಾದ ಪರಿಣಾಮ ಬೀರಿದವು. ಈ ಪರಿಸರವನ್ನು ಸಾಹಿತ್ಯ ಕೃಷಿಗೆ ಚೆನ್ನಾಗಿ ಬಳಸಿಕೊಂಡರು. ಗ್ರಾಮೀಣ ಹಿನ್ನೆಲೆಯಲ್ಲಿ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡರು. ಜನಪದ ಗೀತೆಯನ್ನು ಅರ್ಥಪೂರ್ಣವಾಗಿ ದುಡಿಸಿಕೊಂಡರು.

ಕವಿ ಮನಸ್ಸಿನ 'ಈಶ'ನಿಗೆ ಸುಶ್ರಾವ್ಯ ಕಂಠವೂ ಇದ್ದುದರಿಂದ ಅವರು ಬಾಲ್ಯದಲ್ಲಿಯೇ ಜನಪ್ರಿಯರಾಗಿದ್ದರು. ಆದರೆ ಬಾಲ್ಯ ಸುಖಕರವಾಗಿರಲಿಲ್ಲ. ೧೪ನೇ ವಯಸ್ಸಿನಲ್ಲಿ ವಿಷಮಶೀತಜ್ವರದಿಂದ ನರಳಿದರು. ಅನಂತರ ಪ್ಲೇಗಿಗೆ ತುತ್ತಾದರು. ಬಂಧು ಬಳಗ ಇವರ ಆಸೆಯನ್ನೇ ಬಿಟ್ಟಿದ್ದರೂ ದೇವರ ದಯದಿಂದ ಬದುಕಿ ಉಳಿದರು. ಆದರೆ ೧೯೧೨ ರಲ್ಲಿ ಬೇನೆಯು ಉಲ್ಬಣಗೊಂಡು ಅಕ್ಟೋಬರ್ ೩೦ ರಂದು ಧಾರವಾಡದಲ್ಲಿ ಕೊನೆಯುಸಿರೆಳೆದರು. ಚಿಕ್ಕವಯಸ್ಸಿನಲ್ಲೇ ತಂದೆ ಹಾಗೂ ಅಣ್ಣ ಸ್ವರ್ಗಸ್ಥರಾದುದರಿಂದ ಬೆಟಗೇರಿಯವರ ವಿದ್ಯಾಭ್ಯಾಸ ಮುಲ್ಕಿ ಪರೀಕ್ಷೆಯ ನಂತರ ಮುಂದೆ ಸಾಗಲಿಲ್ಲ. ವಿದ್ವಾಂಸ ನರಸಿಂಹಾಚಾರ್ಯ ಪುಣೇಕರ (ಕಾವ್ಯಾನಂದ) ಬಳಿ ಸಂಸ್ಕೃತ ಹಾಗೂ ಹಳಗನ್ನಡ ವಿದ್ಯಾಭ್ಯಾಸ ಸಾಗಿತು. ಬಾಲಕನ ವಿದ್ಯಾಪರಿಣತಿ ಅಚ್ಚರಿಪಡುವಂತಿತ್ತು. ಬಹು ಬೇಗ ಪಾಂಡಿತ್ಯ ಗಳಿಸಿದರು. ಗುರುಗಳಿಂದ 'ಕವಿಭೂಷಣ' ಬಿರುದನ್ನು ಪಡೆದರು.

ತಂದೆ ಹಾಗೂ ಅಣ್ಣನನ್ನು ಕಳೆದುಕೊಂಡಿದ್ದ ಬೆಟಗೇರಿಯವರ ಹೆಗಲಿಗೆ ಸಂಸಾರ ನಿರ್ವಹಣೆಯ ಹೊಣೆಗಾರಿಕೆ ಬಿತ್ತು. ಇದಕ್ಕಾಗಿ ಇವರು ಸಣ್ಣಪುಟ್ಟ ಕೆಲಸಗಳನ್ನು ನಿರ್ವಹಿಸಬೇಕಾಯಿತು. ಈ ಕಷ್ಟಕಾರ್ಪಣ್ಯಗಳ ಮಧ್ಯೆಯೇ ಇವರ ಸಾಹಿತ್ಯಾಭಿರುಚಿ ದಿನೇದಿನೇ ವೃದ್ಧಿಸುತ್ತಿತ್ತು. ಹಿಂಗದ ದಾಹಕ್ಕಾಗಿ ಇವರನ್ನು ಕಾಡಿಸುತ್ತಿತ್ತು. ಇದನ್ನು ತಣಿಸುವ ಸಲುವಾಗಿ ಇವರು ಹುಡುಗರಾಗಿದ್ದಾಗಲೇ ಕಥೆ, ಕಾದಂಬರಿ, ಪತ್ರಿಕಾ ಲೇಖನಗಳನ್ನು ಓದುವ ಮನೆಮಂದಿಗೆಲ್ಲಾ ಅದನ್ನು ಅರ್ಪಿಸುವ ಕೆಲಸವನ್ನು ಕೈಗೊಂಡರು. ಇದರಿಂದಾಗಿ ಅವರ ಭಾಷಾಸಂಪತ್ತು ವೃದ್ಧಿಸಿತು, ವ್ಯಕ್ತಪಡಿಸುವ ಸಾಮರ್ಥ್ಯ ಬೆಳೆಯಿತು.

ಬೆಳಗಾವಿ ರಾಷ್ಟ್ರೀಯ ಶಾಲೆ, ಬೆಂಗಳೂರಿನ ಆರ್ಯ ವಿದ್ಯಾಶಾಲೆಗಳಲ್ಲಿ ಕೆಲಕಾಲ ಶಿಕ್ಷಕರಾಗಿ ದುಡಿದರು. ೧೯೨೨ ರಲ್ಲಿ ಶಂಬಾ

ಜೋಶಿ ಮತ್ತು ದ. ರಾ. ಬೇಂದ್ರೆಯವರ ಪರಿಚಯವಾಗಿ ಮೈತ್ರಿ ಬೆಳೆಯಿತು. ೧೯೨೩ ರಲ್ಲಿ ಬೆಳಗಾವಿ 'ಮಾತೃಭೂಮಿ' ಪತ್ರಿಕೆಯ ಸಂಪಾದಕರಾದರು. ಇದು ಪತ್ರಿಕೋದ್ಯಮಕ್ಕೆ ನಾಂದಿಯಾಯಿತು. ಅಲ್ಲಿಯವರೆಗೆ ಕವಿತೆಗಳನ್ನು ಮಾತ್ರ ರಚಿಸುತ್ತಿದ್ದ ಕೃಷ್ಣಶರ್ಮರು, ಗದ್ಯ ಲೇಖನದಲ್ಲಿಯೂ ಕೃಷಿ ಮಾಡಿದರು. ೧೯೨೪ ರಲ್ಲಿ ಬೆಳಗಾವಿ ಮರಾಠಿ ಮಯವಾಗಿರುವುದು ಅರಿವಿಗೆ ಬಂದಿತು; ಅಲ್ಲಿ ಕನ್ನಡ ಭಾಷೆ, ಸಂಸ್ಕೃತಿಯನ್ನು ಬೆಳೆಸಲು ಶ್ರಮಿಸಿದರು. ಈ ಅವಧಿಯಲ್ಲಿ ರಚಿಸಿದ 'ಎನಿತು ಇನಿದು ಈ ಕನ್ನಡ ನುಡಿಯು' ಮುಂತಾದ ಕನ್ನಡ ಭಾಷೆ, ಸಂಸ್ಕೃತಿಯ ಹಿರಿಮೆಯನ್ನು ಸಾರುವ ಅನೇಕ ನಾಡಗೀತೆಗಳು ತುಂಬಾ ಜನಪ್ರಿಯತೆಯನ್ನು ಪಡೆದವು.

'ಮಾತೃಭೂಮಿ' ನಿಂತುಹೋದ ತರುವಾಯ ಅವರು ೧೯೨೫ರ ಸುಮಾರಿನಲ್ಲಿ ಧಾರವಾಡಕ್ಕೆ ಬಂದು, 'ಸ್ವಧರ್ಮ' ಪತ್ರಿಕೆಯ ಸಂಪಾದಕರಾದರು. ಅವರ ಹಲವಾರು ಕಥೆಗಳು ಇದರಲ್ಲಿ ಪ್ರಕಟವಾದವು. 'ಸ್ವಧರ್ಮ' ನಿಂತುಹೋದ ಮೇಲೆ ಬೆಂಗಳೂರಿಗೆ ಹೋಗಿ ರಾಷ್ಟ್ರೀಯ ಶಾಲೆ ಸೇರಿದರು. ದೇವುಡುರವರ ಸಹವಾಸದಲ್ಲಿ ಕೆಲ ತಿಂಗಳು ಕಳೆದರು. ಇದೇ ವೇಳೆಯಲ್ಲಿ ಧಾವಾಡದಲ್ಲಿ ಆಲೂರ ವೆಂಕಟರಾಯರು ನಡೆಸುತ್ತಿದ್ದ ಪ್ರಸಿದ್ಧ ಪತ್ರಿಕೆ 'ಜಯಕರ್ನಾಟಕ' ಗೆಳೆಯರ ಗುಂಪಿನ ಕೈಸೇರಿತು. ಗೆಳೆಯರ ಗುಂಪಿನ ಆಹ್ವಾನದ ಮೇರೆಗೆ ಬೆಟಗೇರಿಯವರು ಧಾರವಾಡಕ್ಕೆ ಬಂದರು. ಜಯಕರ್ನಾಟಕದ ಸಂಪಾದಕರಾದರು. ೧೯೩೪ರ ತನಕ ಯಶಸ್ವಿಯಾಗಿ ನಡೆಸಿ ಹಲವಾರು ಕಾಣಗಳಿಂದ ಹೊರಕ್ಕೆ ಬಂದರು. ಅದೇ ವರ್ಷ ಮನೋಹರ ಗ್ರಂಥಮಾಲೆ ಪ್ರಾರಂಭವಾಯಿತು. ಈ ಮಾಲೆಯ ಸಂಪಾದಕತ್ವ ವಹಿಸಿ ಒಂದು ವರ್ಷ ದುಡಿದರು. ಆಗಲೇ ಇವರ ಪ್ರಥಮ ಕಾದಂಬರಿ 'ಸುದರ್ಶನ' ಪ್ರಕಟಗೊಂಡಿತು.

'ಜಯಂತಿ' ಪತ್ರಿಕೆ ೧೯೩೮ ರಲ್ಲಿ ಪ್ರಕಟಗೊಂಡಾಗ

ಬೆಟಗೇರಿಯವರೇ ಅದರ ಸಂಪಾದಕರಾದರು. ಇದು ಸದಭಿರುಚಿ ಮತ್ತು ದೇಶಾಭಿಮಾನ ಬೆಳೆಸುವಲ್ಲಿ ಗಮನಾರ್ಹ ಪಾತ್ರವಹಿಸಿತು. ಈ ಪತ್ರಿಕೆಯ ಮೂಲಕ ಅಪಾರ ಸಂಖ್ಯೆಯ ಲೇಖಕರನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದ್ದಾರೆ. ಬಾಲ್ಯದಿಂದಲೇ ಬೆಳೆದುಬಂದಿದ್ದ ಆಡುಭಾಷೆಯ ಮೇಲಿನ ಪ್ರೀತಿ ಇವರೆಲ್ಲ ಕೃತಿಗಳಲ್ಲಿ ಧಾರಾಳವಾಗಿ ಕಂಡುಬರುತ್ತದೆ.

ಆನಂದಕಂದರ ಸಾಹಿತ್ಯ : ಡಾ. ಬೆಟಗೇರಿಯವರ ಕವನಸಂಗ್ರಹಗಳು ಒಟ್ಟಿಗೆ ಹದಿಮೂರು. ಅವುಗಳಲ್ಲಿ ರಾಷ್ಟ್ರಾಭಿಮಾನ ಮೂಡಿಸುವುದೇ ಅವುಗಳ ಪ್ರಮುಖ ಉದ್ದೇಶವಾಗಿದೆ. ೧. ರಾಷ್ಟ್ರೀಯ ಪದ್ಯಾವಳಿ ೨. ರಾಷ್ಟ್ರೀಯ ಪದ್ಯಮಾಲೆ ೩. ಗಾಂಧೀ ಗೀತಪುಸ್ತಕ, ೪. ರಮೆಯುಮೆಯವರ ಸಂವಾದ ೫. ಮುದ್ದನ ಮಾತು ೬. ಅರುಣೋದಯ ೭. ವಿರಹಿಣಿ ೮. ಒಡನಾಡಿ ೯. ಕಾರಹುಣ್ಣಿವೆ ೧೦. ನಲ್‌ವಾಡುಗಳು ೧೧. ಉತ್ಸಾಹಗಾಥಾ ೧೨. ಸಾಮಾಜಿಕನ ಸಂವಚನಗಳು ಮುಂತಾದವುಗಳನ್ನು ಹೆಸರಿಸಬಹುದು.

ಸಣ್ಣ ಕಥಗಳ ಪ್ರಾರಂಭದಲ್ಲಿಯೇ ಸಾಹಿತ್ಯ ಕೃಷಿ ಪ್ರಾರಂಭಿಸಿದ ಡಾ. ಬೆಟಗೇರಿಯವರು ೧. ಸಂಸಾರ ಚಿತ್ರ ೨. ಬಡತನದ ಬಾಳು ೩. ನಮ್ಮ ಬದುಕು ೪. ಮಾತನಾಡುವ ಕಲ್ಲು ೫. ಜನಪದ ಜೀವನ ೬. ದಶಮಂಜರಿ (ಆಯ್ದ ಕತೆಗಳು) ೭. ಕಳ್ಳರು ಮತ್ತು ಇತರ ಕಥೆಗಳು ಎಂಬ ಏಳು ಕಥಾಸಂಕಲನಗಳನ್ನು ಹೊರ ತಂದಿದ್ದಾರೆ.

೧. ಸುದರ್ಶನ ೨. ರಾಜಯೋಗಿ ೩. ಅಶಾಂತಿಪರ್ವ ೪. ಮಗಳ ಮದುವೆ ೫. ಮಲ್ಲಿಕಾರ್ಜುನ ಎಂಬ ಐದು ಕಾದಂಬರಿಗಳು ಪ್ರಕಟಗೊಂಡಿವೆ.

೧. ಬೆಳವಡಿ ಮಲ್ಲಮ್ಮ ೨. ಬೆಂದ ಹೃದಯ ೩. ಮುಂಡರಗಿ ಗಂಡುಗಲಿ ೪. ಪಂಚಗಂಗಾ ಎಂಬ ನಾಲ್ಕು ರೂಪಕಗಳು ಪ್ರಕಟವಾಗಿವೆ.

ಸಂಸ್ಕೃತಿ ಸಂಶೋಧನೆಗೆ ಸಂಬಂಧಿಸಿದಂತೆ ೧. ಕರ್ನಾಟಕ ಜೀವನ ೨. ಸಾಹಿತ್ಯವು ಸಾಗಿದ ದಾರಿ ೩. ನಮ್ಮ ಸಂಸ್ಕೃತಿ ಪರಂಪರೆ ೪. ಸಾಹಿತ್ಯ ವಿಹಾರ ಎಂಬ ನಾಲ್ಕು ಕೃತಿಗಳು ಪ್ರಕಟಗೊಂಡಿವೆ. ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ–೧. ಬೀಸುಕಲ್ಲಿನ ಹಾಡುಗಳು ೨. ಕನ್ನಡ ಜಾನಪದ ಸಾಹಿತ್ಯ ೩. ಅಧ್ಯಕ್ಷೀಯ ಭಾಷಣ (ನಾಗಮಂಗಲದ ಜನಪದ ಸಾಹಿತ್ಯ ಸಮ್ಮೇಳನ) ಮುಂತಾದವುಗಳನ್ನು ಹೆಸರಿಸಬಹುದು.

'ಕನ್ನಡ ರಾಜ್ಯ ರಮಾರಮಣ' ಎಂಬ ಚರಿತ್ರೆ ಗ್ರಂಥ 'ಮಧ್ಯಮ ವ್ಯಾಯೋಗ'ವೆಂಬ ಅನುವಾದ ಗ್ರಂಥವು ಬೆಳಕುಕಂಡಿವೆ. ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ–೧. ಚಂದ್ರಹಾಸ ೨. ಬಸವಣ್ಣನವರು ೩. ಭೀಷ್ಮ ೪. ಲವಕುಶ ಎಂಬ ನಾಲ್ಕು ಗ್ರಂಥಗಳು ಪ್ರಕಟಗೊಂಡಿವೆ.

೧. ಮಾತೃಭೂಮಿ ೨. ಸ್ವಧರ್ಮ ೩. ಜಯಕರ್ನಾಟಕ ೪. ಜಯಂತಿ ಎಂಬ ಪತ್ರಿಕೆಗಳ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಬೆಟಗೇರಿಯವರ ಸಂಪಾದಿತ ಕೃತಿಗಳಲ್ಲಿ ೧. ಮೃಚ್ಛಕಟಿಕ ೨. ಪೂಜಾತತ್ವ ೩. ಆರ್ತಭಾವ ೪. ಮಹಾತ್ಮ್ಯಜ್ಞಾನ ೫. ಕನಕದಾಸರ ಭಕ್ತಿಗೀತೆಗಳು ೬. ಕೃಷ್ಣಲೀಲಾ ೭. ಲೋಕನೀತಿ ೮. ಸಂಕೀರ್ಣ ೯. ಅಕ್ರೂರ ಚರಿತ್ರೆ ೧೦. ಪ್ರಸನ್ನ ವೆಂಕಟದಾಸರ ಭಾಗವತ ೧೧. ಹರಿದಾಸ ಭಕ್ತಿಸಾಧನೆ ಮುಂತಾದವುಗಳನ್ನೂ ಹೆಸರಿಸಬಹುದು.

ಹೀಗೆ ಕನ್ನಡ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಸಾಹಿತ್ಯ ಕೃಷಿ ಮಾಡಿ ಕನ್ನಡ ಸಾಹಿತ್ಯದ ಕಣಜವನ್ನು ಶ್ರೀಮಂತಗೊಳಿಸಿದ್ದಾರೆ. ಅವುಗಳಲ್ಲಿ ಜಾನಪದ ಕ್ಷೇತ್ರಕ್ಕೆ ಶ್ರೀಯುತರು ಸಲ್ಲಿಸಿದ ಕೊಡುಗೆಯನ್ನು ಮಾತ್ರ ಪ್ರಸ್ತುತ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ.)

ಪರಿಸರ-ಪ್ರಭಾವ-ಪ್ರೇರಣೆ :

ಬೆಟಗೇರಿ ಕೃಷ್ಣಶರ್ಮರಿಗೆ ತಮ್ಮ ಆರನೆಯ ವಯಸ್ಸಿನಿಂದಲೇ ಜನಪದ ಸಾಹಿತ್ಯ-ಕಲೆಗಳ ಕಡೆಗೆ ಒಲವು ಬೆಳೆಯಿತು. ಬೆಳಗಾವಿ ಜಿಲ್ಲೆ ಜನಪದ ಸಾಹಿತ್ಯಕಲೆಗಳ ತವರೂರು. ಬರಗಾಲದ ಕಾರಣದಿಂದ ಅವರ ತಂದೆ ಬಗನಾಳದಲ್ಲಿ ವಾಸ್ತವ್ಯ ಮಾಡಿದಾಗ, ಆ ಊರಿನಲ್ಲಿ ಆಗಾಗ ನಡೆಯುತ್ತಿದ್ದ ಅನೇಕ ಜನಪದ ಕಲೆಗಳ ಪ್ರದರ್ಶನ, ಬೆಟಗೇರಿಯವರಲ್ಲಿ ಜಾನಪದದ ಬಗ್ಗೆ ವಿಶೇಷ ಆಸಕ್ತಿ ಮೂಡಲು ಕಾರಣವಾಯಿತು. ಕಣಿಮೇಳಗಳ ಸ್ಪರ್ಧೆ, ಲಾವಣಿ, ಹಾಡುಗಾರಿಕೆ, ಸೋಗಿನ ವೇಷಗಳು ಮುಂತಾದವು ಬಾಲಕ ಕೃಷ್ಣಶರ್ಮನ ಮೇಲೆ ಅಗಾಧ ಪರಿಣಾಮ ಬೀರಿದವು. ಒಟ್ಟಿನಲ್ಲಿ ಗ್ರಾಮೀಣ ಜನರ ಮನರಂಜನೆಯ ಸಾಧನವಾಗಿ ಜನಪದ ಕಲೆ-ಸಾಹಿತ್ಯಗಳು ಬಳಕೆಯಾಗುತ್ತಿರುವುದನ್ನು, ಜನಪದರ ಮೇಲೆ ಅವು ಅಚ್ಚಳಿಯದ ಪ್ರಭಾವ ಬೀರುತ್ತಿದ್ದುದನ್ನು ಕೃಷ್ಣಶರ್ಮರು ಬಾಲ್ಯದಲ್ಲಿಯೇ ಗುರುತಿಸಿದ್ದರು.

ಬಾಲ್ಯದಲ್ಲಿಯೇ ಅವರು ಗಮನಿಸಿದ ಮತ್ತೊಂದು ಗುಣವೆಂಥರೆ ಜನಪದ ಭಾಷೆಯ ಸತ್ವ. ಜನಪದರ ಗದ್ಯದ ಮಾತುಗಾರಿಕೆಗೆ ಅವರು ಮನಸೋತವರು. ತಮ್ಮ ಊರಿನ ಮಲ್ಲವ್ವ, ಕೆಂಚವ್ವ ಮುಂತಾದ ಮುದುಕಿಯರ ಮಾತುಗಳಲ್ಲಿ ಜನಪದ ಭಾಷೆಯ ಶಕ್ತಿ ಸಾಮರ್ಥ್ಯ ಕಂಡುಕೊಂಡರು. ಅದರಂತೆ ಜನಪದ ಕತೆಗಳನ್ನು ಜನಸಾಮಾನ್ಯರ ಬಾಯಿಯಲ್ಲಿಯೇ ಕೇಳುತ್ತ, ರೋಚಕವಾದ ಅವರ ಕಥನ ತಂತ್ರವನ್ನು ಮೆಚ್ಚಿ ತಲೆದೂಗಿದರು; ಹೆಣ್ಣು ಮಕ್ಕಳ ಕುಟ್ಟುವ-ಬೀಸುವ ಹಾಡುಗಳ ಸೊಲ್ಲಿಗೆ ಮಾರುಹೋದರು; ಜಾತ್ರೆಯ ಪದಗಳೂ ಅವರನ್ನು ಆಕರ್ಷಿಸಿದವು. ಹೀಗೆ ಬಾಲ್ಯದಲ್ಲಿಯೇ ಜನಪದ ಸಾಹಿತ್ಯದ ಸತ್ವ-ಸೌಂದರ್ಯಗಳನ್ನು ಗ್ರಹಿಸಿ-ಆಸ್ವಾದಿಸಿ, ಮುಂದೆ ಅದೇ ಆಸಕ್ತಿಯನ್ನು ಜೀವಂತವಾಗಿ ಉಳಿಸಿಕೊಂಡು ಬಂದ ಆನಂದಕಂದರು,

ಕೊನೆಯವರೆಗೂ ಜಾನಪದದ ಸ್ಥಾನ-ಮಾನಗಳಿಗಾಗಿ ಕನವರಿಸಿದರು. ಬಾಲ್ಯದ ಜಾನಪದೀಯ ಅನುಭವಗಳು ಕೃಷ್ಣಶರ್ಮರಿಗೆ ಮಾನವ ಸ್ವಭಾವವನ್ನು ಅರಿತುಕೊಳ್ಳಲು ಸಹಾಯಕವಾದವು. ಹೆಂಗಳೆಯರ, 'ಜೋಗುಳದ ಹಾಡು', 'ಬೀಸುವಕಲ್ಲಿನ ಹಾಡುಗಳು' ಅವರ ಭಾವಕೋಶವನ್ನು ತುಂಬಿಸಿದವು. 'ನನ್ನ ನೆನಪುಗಳು' ಗ್ರಂಥದಲ್ಲಿ ಅವರು ಹೇಳುತ್ತಾರೆ: ಜನಪದ ಸಾಹಿತ್ಯ ನನ್ನ ಬಾಲ್ಯ ಜೀವನದಲ್ಲಿ ನನಗೆ ಸಹಜವಾಗಿ ಒದಗಿದ ಸಂಸ್ಕಾರವು. ಒಂದು ಕಡೆ ಗೋಕಾವಿಯ ಅನಂತ್ರಾದೀಶರ ಆಡುನುಡಿಯ ಕಾವ್ಯಗಳ ಪಾರಾಯಣ ಮತ್ತು ಇನ್ನೊಂದು ಕಡೆ ಈ ಜನಪದ ಸಾಹಿತ್ಯ ಸುಧೆಯ ಅನುಪಾನ; ನನ್ನಲ್ಲಿ ಒಂದು ವಿಶೇಷವಾದ ಸಾಹಿತ್ಯಿಕ ಸಂವೇದನೆಯನ್ನು ಮೂಡಿಸಿತು. ನಾನು ನನ್ನ ಬಾಲ್ಯದಿಂದ ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೇ ಹೋದೆನು; ಆದರೆ ಆ ಸಂಗ್ರಹ ಬರಹದಲ್ಲಿ ಇರಲಿಲ್ಲ. ಅದು ನೇರವಾಗಿ ನನ್ನ ಮಸ್ತಕದಲ್ಲಿ ನಿಂತಿದ್ದು. ದೇಶಿಯ ಚಿಂತನೆಗಳು ಪ್ರಾಮುಖ್ಯತೆ ಪಡೆಯುತ್ತಿರುವ ಸದ್ಯದ ಪರಿಸ್ಥಿತಿಯಲ್ಲಿ ೫೦-೬೦ ವರ್ಷಗಳ ಹಿಂದೆ. ಆ ಬಗೆಯಲ್ಲಿ ಚಿಂತನೆಮಾಡಿದ ಅಪ್ಪಟ ಜಾನಪದೀಯ ಪರಿಸರದಲ್ಲಿ ಹುಟ್ಟಿ-ಬೆಳೆದು, ಮೌಖಿಕ ಪರಂಪರೆಯ ಜಾನಪದದ ಮೂಲ ಬೇರುಗಳನ್ನು ಗಟ್ಟಿಯಾಗಿ ಹಿಡಿದುಕೊಂಡ ಬೆಟಗೇರಿ ಕೃಷ್ಣಶರ್ಮರ ಚಿಂತನೆಗಳು ದೇಶಿಯತೆಯ ದೃಷ್ಟಿಯಿಂದ ಎಷ್ಟು ಮಹತ್ವವಾಗಿದ್ದವು ಎಂಬುದನ್ನು ಮತ್ತೆ ಆಲೋಚಿಸಬೇಕಾದ ಕಾಲ ಪ್ರಾಪ್ತವಾಗಿದೆ. (ಆನಂದಕಂದ-ದೇಶಿ ಪ್ರತಿಭೆಯ ಸಾಧನೆ ಪುಟ-೬೧).

ಆ ಕಾಲದಲ್ಲಿ ಜಾನಪದ ವಿದ್ವಾಂಸರ ಮೇಲೆ ಎರಡು ಪ್ರಮುಖ ಜವಾಬ್ದಾರಿಗಳು ಇದ್ದವು. ಒಂದು : ಸಂಗ್ರಹ ಕಾರ್ಯ-ಅಧ್ಯಯನ-ವ್ಯಾಖ್ಯಾನ. ಇನ್ನೊಂದು : ಪ್ರಚಾರ ಕಾರ್ಯ. ಎರಡಕ್ಕೂ ಅಷ್ಟೇ ಮಹತ್ವವನ್ನು ಕೊಡುವುದು ಅನಿವಾರ್ಯವಾಗಿತ್ತು. ಪಾಶ್ಚಾತ್ಯ ಪ್ರಭಾವದಿಂದ ಆಗಲೇ ತಿರಸ್ಕಾರಕ್ಕೆ

ಒಳಗಾಗಿದ್ದ ಪರಂಪರೆಯ ಅಂಶಗಳನ್ನು ಮತ್ತೆ ಶೋಧಿಸಿ, ಅವುಗಳ ಸಾಂಸ್ಕೃತಿಕ ಮಹತ್ವವನ್ನು ತಿಳಿಸಬೇಕಿತ್ತು. ಜನಸಾಮಾನ್ಯರಲ್ಲಿ ಜನಪದ ಸಾಹಿತ್ಯ-ಸಂಸ್ಕೃತಿ ಕುರಿತು ಅಭಿಮಾನ, ಅಭಿರುಚಿ ಹುಟ್ಟಿಸುವ ಕೆಲಸ ತೀವ್ರವಾಗಿ ಮಾಡಬೇಕಿತ್ತು.

ಜನಪದ ಕ್ಷೇತ್ರ ಕಾರ್ಯ

'ಆನಂದ ಕಂದ' ಕಾವ್ಯನಾಮದ ಡಾ. ಬೆಟಗೇರಿ ಕೃಷ್ಣಶರ್ಮರು ಕನ್ನಡ ಜಾನಪದ ಕ್ಷೇತ್ರದಲ್ಲಿ ಮಾಡಿದ ಕಾರ್ಯ ವೈವಿಧ್ಯಪೂರ್ಣವೂ ಮೌಲಿಕವೂ ಆಗಿದೆ. ೧೯೨೨ ರಿಂದಲೇ ನಿರಂತರ ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಅಧ್ಯಯನ ಪ್ರಕಟನಾಕಾರ್ಯ ಮಾಡಿದ್ದಾಗಿ ಹೇಳಿಕೊಂಡಿದ್ದಾರೆ. ಆಧುನಿಕವಾಗಿ ಕನ್ನಡ ಜಾನಪದದ ಒಗಗೆ ಅಧ್ಯಯನ ಮಾಡುವವರು ಯಾವ ವ್ಯಕ್ತಿ ಯಾವ ಕಾರ್ಯ ಮಾಡಿದ್ದಾರೆ ಎಂಬ ಅಳತೆಗೋಲನಿಟ್ಟರೆ ಆ ಅಳತೆಗೋಲಿನಲ್ಲಿ ಡಾ. ಕೃಷ್ಣಶರ್ಮರು ಮೊದಲಿಗರಾಗಿ ಕಾಣುತ್ತಾರೆ. ಕ್ರಿ.ಶ. ೧೯೨೯ ರಲ್ಲಿ ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ ಜನಪದ ತ್ರಿಪದಿಗಳನ್ನು ಹಾಡಿ, ಅವುಗಳಲ್ಲಿಯ ಸೌಂದರ್ಯವನ್ನು ವಿವರಿಸಿ, ರಸಿಕರು ಅವುಗಳಿಗೆ ಮಾರುಹೋಗುವಂತೆ ಮಾಡಿದ್ದಾರೆ.

ಆನಂದಕಂದರ ಜಾನಪದ ಕಾರ್ಯ ಕೇವಲ ಜಾನಪದ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ; ಜನಪದ ಸಂಸ್ಕೃತಿ, ಜನಪದ ಐತಿಹ್ಯ, ಜನಪದ ಜೀವನ ಮುಂತಾದವುಗಳನ್ನು ಒಳಗೊಂಡಿತ್ತು. ಅವರು ಜಾನಪದದ ಬಗ್ಗೆ ಬರೆದುದಕ್ಕಿಂತ ಒರೆದುದೇ ಹೆಚ್ಚು. ಆರಂಭ ಕಾಲದಲ್ಲಿ ಬರೆದ ಕೃಷ್ಣಶರ್ಮರ ಕೆಲವು ಬರಹಗಳು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿವೆ.

ಬೀಸುವ ಕಲ್ಲಿನ ಹಾಡು (೧೯೨೮) : ಜೀಸುವ ಕಲ್ಲಿನ ಹಾಡುಗಳನ್ನು ರಚಿಸಿದವರೆಲ್ಲರೂ ಬಹುತರವಾಗಿ ಹೆಣ್ಣುಮಕ್ಕಳು. ಇವುಗಳಲ್ಲಿ ಸ್ತ್ರೀಯರ ಹೃದಯ ಚಿತ್ರಗಳನ್ನೇ ಕಾಣಬಹುದು.

'ಬೇಸಿಗೆಯ ದಿವಸಕ ಬೇವಿನಮರ ತಂಪ
ಭೀಮರತಿ ಎಂಬ ನದಿ ತಂಪು
ಭೀಮರತಿ ಎಂಬ ನದಿ ತಂಪು ಹಡೆದಮ್ಮ
ನೀನಿರಲು ತಂಪು ತವರಿಗೆ.

ಹೀಗೆ ಜೀವನದ ನೈಜತೆಗಳನ್ನು ಕುರಿತು ರಾಶಿರಾಶಿಯಾಗಿ ಹಾಡುಗಳನ್ನು ಹಾಡಿದ್ದಾರೆ ಗರತಿಯರು.

ಹಳ್ಳಿಗರ ಹಾಡು (೧೯೩೦) : ಹಳ್ಳಿಯಲ್ಲಿದ್ದಾಗ ಸಂಗ್ರಹಿಸಿದ ಜನಪದ ತ್ರಿಪದಿಗಳ ಚೆಲುವು ಆನಂದಕಂದರನ್ನು ರಸಾನಂದಗೊಳಿಸಿತ್ತು. ಆ ರಸಾನಂದದ ಸವಿಯನ್ನು ಕನ್ನಡಿಗರಿಗೆ ನೀಡಬೇಕೆಂಬ ಬಯಕೆಯಿಂದ 'ಹಳ್ಳಿಗರ ಹಾಡುಗಳು' ಎಂಬ ವಿವರವಾದ ರಸವಿಮರ್ಶೆಯೊಂದನ್ನು ಬರೆದರು. ಇದು ೧೯೩೦ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಯಿತು. ಡಾ. ಬೆಟಗೇರಿ ಕೃಷ್ಣಶರ್ಮರ ಜಾನಪದ ದುಡಿಮೆಯಲ್ಲಿ ಅವರ ಮಿದುಳು ಹಾಗೂ ಕಂಡ ಮಾಧುರ್ಯ ಬಹು ದೊಡ್ಡ ಕಾರ್ಯ ಮಾಡಿದೆ. ಇದಕ್ಕೆ ಅವರ ಹಳ್ಳಿಗರ ಹಾಡುಗಳು ಸಾಕ್ಷಿಯಾಗಿವೆ.

ಅಕ್ಕ ತಂಗೇರು ಜೋಡು ಸೀರೆ ಕುಪ್ಪಸ ಜೋಡು
ಓಲೆಗೆ ಜೋಡು ಚೆಳತುಂಬು–ನನ ತಂಗಿ
ನಾವಿಬ್ಬರು ಜೋಡು ತವರಿಗೆ.

ಇದನ್ನು ಓದಿದ ಓದುಗರು ಜನಪದ ಸಾಹಿತ್ಯದೆಡೆಗೆ ಆಕರ್ಷಿತರಾದರು. ಜನಪದ ಸಾಹಿತ್ಯದೆಡೆಗೆ ಜನತೆಯ ಮನವನ್ನು ಸೆಳೆದ ಆರಂಭ ಕಾಲದ ಮಹತ್ವದ ಲೇಖನಗಳಲ್ಲಿ ಇದಕ್ಕೆ ಅಗ್ರಸ್ಥಾನವಿದೆ ಇದನ್ನು ಬೇಂದ್ರೆಯವರು 'ನಿತಾಂತ ಮನೋಹರ ನಿಬಂಧ' ಎಂದು ಕರೆದಿದ್ದಾರೆ. "ಪ್ರಹ್ಲಾದ ನರೇಗಲ್ಲರು ಕರ್ನಾಟಕ ಕಾಲೇಜ ಪತ್ರಿಕೆಯಲ್ಲಿ 'ವಾಸ್ತವ ಸಾಹಿತ್ಯ' ಎಂಬ ಲೇಖನವನ್ನು, ಬೆಟಗೇರಿಯವರು ಪರಿಷತ್ಪತ್ರಿಕೆಯಲ್ಲಿ 'ಹಳ್ಳಿಗರ ಹಾಡು' ಎಂಬ ತ್ರಿಪದಿಗಳ ಸಂಗ್ರಹವನ್ನು, ಮುಂಬಯಿ 'ಪ್ರಬೋಧಕ'

ಮಾಸಪತ್ರಿಕೆ ಸಂಪಾದಕರು ಹಿರಿಯ ಬರಹವೊಂದನ್ನು ಬರೆದು ಜನಪದ ಸಾಹಿತ್ಯದ ಕಾರ್ಯವನ್ನು ಎತ್ತಿಹಿಡಿದಿದ್ದಾರೆ" ಎಂಬ ಮಾತು ಉಲ್ಲೇಖನೀಯವಾಗಿದೆ.

ಕೆರೆಗೆ ಹಾರ (೧೯೨೨) : ಕ್ರಿ.ಶ. ೧೯೨೨ ರಿಂದ ತಮ್ಮ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾವಪೂರ್ಣವಾಗಿ ಹಾಡಿ ತೋರಿಸುತ್ತಿದ್ದರು. ಇದನ್ನು ಹುಟ್ಟೂರಾದ ಬೆಟಗೇರಿಯಲ್ಲಿ ಸಂಗ್ರಹಮಾಡಿ ಸಂಶೋಧಿಸಿದ್ದಾರೆ. ಇದು. ಉತ್ತರ ಕರ್ನಾಟಕದ ಜನಪದದ ಸೊಬಗು–ಸೌಂದರ್ಯ–ಸರಳತೆಗಳನ್ನು ಮೂಡಿಸಿದ ಕಥನ ಕಾವ್ಯವಾಗಿದೆ. ಸವದತ್ತಿ ತಾಲ್ಲೂಕಿನ ಯರಗಟ್ಟಿ ಹೂಗಾರ ಮನೆತನದ ಮಗಳು, ಬೆಟಗೇರಿಯ ಕಲ್ಲಯ್ಯ ಹೂಗಾರ ಇವರ ಹೆಂಡತಿಯಿಂದ ಸಂಗ್ರಹಿಸಿದರು. ಈ ಹಾಡು (ಕೋಲು ಪದ) ಬೆಟಗೇರಿಯವರಿಗೆ ಜನಪದ ಶೈಲಿಯನ್ನೇ ಕಲಿಸಿತು. ಮಧುರ ಕಂಠದಿಂದ ಈ ಹಾಡನ್ನು, ಅದರ ರಸವಿಮರ್ಶೆಯನ್ನು ಕೇಳಿದವರು ಮಂತ್ರಮುಗ್ಧರಾಗುತ್ತಿದ್ದರಂತೆ. ಸಾಹಿತ್ಯ ಪರಿಷತ್ತಿನ ಪ್ರಕಟನೆ 'ಕನ್ನಡ ಬಾವುಟ'ದಲ್ಲಿ ಇದು ಪ್ರಕಟವಾದಾಗ ಅದರ ಕಾವ್ಯ ಸೌಂದರ್ಯಕ್ಕೆ, ಧ್ವನಿರಮ್ಯತೆಗೆ ಮನಸೋತು ತಣಿದುದುಂಟು. ಬೆಟಗೇರಿಯವರಿಗೆ ಜಾನಪದ ಸಂಗ್ರಹ ಹಾಗೂ ಪ್ರಕಟನೆಯ ಮಹತ್ವ ಅರಿವಾದುದೇ 'ಕೆರೆಗೆ ಹಾರ'ದಿಂದ ಎಂಬುದು ಮಹತ್ವದ ಸಂಗತಿ. ಇದು ಉತ್ತರ ಕಾರ್ನಾಟಕದ ಜಾನಪದದ ಸೊಬಗು ಸೌಂದರ್ಯ ಸರಳತೆಗಳನ್ನು ಮೂಡಿಸಿದ ಕಥನ ಕವನವಾಗಿದೆ.

ತೀ.ನಂ. ಶ್ರೀಕಂಠಯ್ಯನವರು 'ಸಮಾಲೋಕನ'ದಲ್ಲಿ ಪ್ರಕಟಿಸಿರುವ 'ಕೆರೆಗೆ ಹಾರ' ಹಾಡಿನ ರಸವಿಮರ್ಶೆ ಅಗ್ರಗಣ್ಯವಾದುದು.

ಪತ್ರಿಕೆಯಲ್ಲಿ ಜನಪದ ಸಾಹಿತ್ಯ (೧೯೩೧–೩೮)

ಪತ್ರಿಕೋದ್ಯಮ ಬೆಟಗೇರಿಯವರ ವ್ಯಕ್ತಿತ್ವದ ಒಂದು ಅವಿಭಾಜ್ಯ ಅಂಗವಾಗಿತ್ತು. ಸೃಜನಶೀಲತೆಯನ್ನು ಸಾಹಿತ್ಯಕೃತಿಗೆ ಮಾತ್ರ ಸೀಮಿತಗೊಳಿಸದೆ, ಪತ್ರಿಕೋದ್ಯಮದಲ್ಲೂ ದುಡಿಸಿಕೊಂಡರು. ಕನ್ನಡ

ನಾಡಿನ ಮಹತ್ವದ ಪತ್ರಿಕೆಗಳಾಗಿದ್ದ 'ಜಯಕರ್ನಾಟಕ' ಮತ್ತು 'ಜಯಂತಿ' ಗಳಲ್ಲಿ ಪ್ರಕಟಿಸಿದ ಜನಪದ ಹಾಡು, ಕಥೆ, ಲೇಖನಗಳು ಜಾನಪದ ಪ್ರಸಾರಕ್ಕೆ ಚಾಲನೆ ನೀಡಿದವು. ಶಂ ಬಾ ಜೋಶಿ ಅವರ ಆಮಂತ್ರಣದ ಮೇರೆಗೆ 'ಜಯಕರ್ನಾಟಕ'ದಲ್ಲಿ ಸಂಪಾದಕರಾಗಿ ೧೯೩೧ ರಿಂದ ಕೆಲವು ವರ್ಷ ದುಡಿದರು. ಆ ಸಂದರ್ಭದಲ್ಲಿ ಪತ್ರಿಕೆಯ ಒಂದು ಭಾಗವನ್ನು ಜನಪದ ಹಾಡುಗಳ ಪ್ರಕಟನೆಗಾಗಿ ಮೀಸಲಿಟ್ಟಿದ್ದರು.

೧೯೩೮ ರಲ್ಲಿ ಅವರು 'ಜಯಂತಿ' ಪತ್ರಿಕೆಯನ್ನು ಪ್ರಾರಂಭಿಸಿದಾಗ ಅದರಲ್ಲಿ ಜನಪದ ಕಥೆಗಳನ್ನು ಪ್ರಕಟಿಸಿದರು. ಜಯಂತಿಯಲ್ಲಿ ಕನ್ನಡನಾಡು-ನುಡಿ ರಕ್ಷಣೆ, ದೇಶಪ್ರೇಮ, ಜನಜಾಗೃತಿ ಮುಂತಾದ ವಿಭಾಗಗಳನ್ನು ಮಾಡಿ ಸ್ವತಃ ಬರೆಯುತ್ತಿದ್ದರು. ಇವರಿಗೆ ಜನಪದ ಕಥೆಗಳು ಬಹುಪ್ರೀತಿ. ಕನ್ನಡ ಜನಾಂಗ, ಕನ್ನಡ ಭಾಷೆ ಇವು ಇತಿಹಾಸ ಕಾಲದ ಹಿಂದೆ ಮರೆಯಾಗಿದ್ದ ಕಾಲದಲ್ಲೂ ಬದುಕಿಬಾಳಿದವು. ಜೊತೆಗೆ ಕನ್ನಡ ಜನಪದ ಜೀವನವು ಬೇರೆ ಬೇರೆ ಕಾಲದ ಸಂಸ್ಕೃತಿಗಳನ್ನು ತನ್ನೊಡನೆ ಸೇರಿಸಿಕೊಂಡು ವರ್ತಮಾನ ಕಾಲದವರೆಗೂ ತಂದುಬಿಟ್ಟಿದೆ. ಕನ್ನಡ ಪುರಾತನರು ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿ ದೇಶ ವಿದೇಶಗಳಲ್ಲಿ ತಮ್ಮ ಶೌರ್ಯ ಧೈರ್ಯ ದಿಗ್ವಿಜಯವನ್ನು ಮೆರೆದವರು. ಕುಬೇರನಿಗೆ ಕೈಗಡ ಕೊಡಬಲ್ಲ ಕನ್ನಡ ಹರದ ಹೆಗ್ಗಡೆಗಳು, ಹಡಗುಗಳನ್ನು ಕಟ್ಟಿ ಪರನಾಡಿನ ವ್ಯವಹಾರದಿಂದ ನಾಡಸಿರಿಯನ್ನು ಹೆಚ್ಚಿಸಿದವರು. ಇವರೆಲ್ಲರ ರಮ್ಯ ಜೀವನಗಳನ್ನೊಳಗೊಂಡ ಜನಪದ ಕಥೆಗಳು ಕನ್ನಡ ನಾಡಿಗೆ ಒಂದೊಂದು ಹಳ್ಳಿಗೂ ಹತ್ತಾರು ಸಿಕ್ಕಾವು. ಕನ್ನಡ ಸಂಸ್ಕೃತಿಯ ಸಂರಕ್ಷಣ ದೃಷ್ಟಿಯಿಂದಲೂ ಆ ಕಥೆಗಳಲ್ಲಿರುವ ಸಾಹಿತ್ಯ ಸೊಗಸನ್ನು ಬೆಳೆಯುವ ಕನ್ನಡಿಗ-ಕನ್ನಡತಿಯರು ಅರಿತುಕೊಳ್ಳುವ ಅಪೇಕ್ಷೆಯಿಂದಲೂ ಅಲ್ಲಲ್ಲಿ ಚದುರಿ ಹೋಗಿರುವ ಆ ಕಥೆಗಳನ್ನೆಲ್ಲ ಕೂಡಿಸಿ ಒಂದೊಂದರಂತೆ ಆಗಾಗ ಜಯಂತಿಯಲ್ಲಿ ಸಚಿತ್ರವಾಗಿ ಪ್ರಕಟಿಸಬೇಕೆಂದಿರುವೆವು ಎಂಬುದಾಗಿ

ಜಯಂತಿ ಪತ್ರಿಕೆಯಲ್ಲಿ ಎರಡು ಮೂರು ಸಲ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಶ್ರೀ ಬೆಟಗೇರಿ ಕೃಷ್ಣಶರ್ಮರು ಕರೆಕೊಟ್ಟದ್ದುಂಟು. (ಡಾ. ಬೆಟಗೇರಿಯವರ ಜಾನಪದ ಕಾರ್ಯ-ಪುಟ-೧೪೫-೧೪೬- ಡಾ. ನಿಂಗಣ್ಣ ಸಣ್ಣಕ್ಕಿ). ನಮ್ಮ ಕಥೆ, ಕಾದಂಬರಿಗಳು ನಮ್ಮ ಜನಪದ ಜೀವನದ ಚಿತ್ರಗಳಾಗಿರಬೇಕೇ ಹೊರತು ಪರಭಾಷಾ ಸಾಹಿತ್ಯ ಕೃತಿಗಳ ಪ್ರತಿಬಿಂಬಗಳಾಗಿ ಬರಬಾದೆಂಬುದು ಮೊದಲಿನಿಂದಲೂ ನನ್ನ ಹಾರೈಕೆ (ಜನಪದ ಜೀವನ) ಎಂಬ ಆಶಯವನ್ನು ಆನಂದಕಂದರು ತಮ್ಮೆಲ್ಲ ಕಥೆಗಳಲ್ಲಿ ಪ್ರತಿಪಾದಿಸಿದ್ದಾರೆ. 'ಜಯಂತಿ' ಪತ್ರಿಕೆಯಲ್ಲಿ ಬೆಟಗೇರಿಯವರು ಜಾನಪದ ವಿಷಯಕ್ಕೆ ಸಂಬಂಧಿಸಿದ ಲೇಖನಗಳನ್ನು ಆಗಾಗ ಪ್ರಕಟಪಡಿಸುತ್ತಿದ್ದರು. ಈಗ ಅವೆಲ್ಲವೂ ಜಾನಪದ ಅಧ್ಯಯನದಲ್ಲಿ ಆಕರ ಸಾಮಗ್ರಿಗಳಾಗಿ ಮಹತ್ವವನ್ನು ಪಡೆದುಕೊಂಡಿರುತ್ತವೆ. ಉದಾಹರಣೆಗೆ:

ಲೇಖನಗಳು	ಆಕರ
೧. ನಮ್ಮ ಹಬ್ಬ ಹುಣ್ಣಿಮೆಗಳು	ಜಯಂತಿ ಸಂಪುಟ ೧೩, ಸಂಚಿಕೆ ೯ ಫೆಬ್ರವರಿ ೧೯೫೧
೨. ಜಾನಪದ ಐತಿಹಾಸಿಕ ಕಥೆಗಳು	ಸಂಪುಟ ೧೩,ಸಂಚಿಕೆ ೧೨ ಮೇ ೧೯೫೧
೩. ನಮ್ಮ ಜಾನಪದ ನಾಟ್ಯಭೂಮಿ ದೊಡ್ಡಾಟಗಳು ಉದಾ : ರೂಪಸಿಂಗನಾಟ	ಸಂಪುಟ ೧೪ ಸಂಚಿಕೆ ೯ ಫೆಬ್ರವರಿ ೧೯೫೨
೪. ನಮ್ಮ ಜಾನಪದ ನಾಟ್ಯಭೂಮಿ (ಗೊಂಬೆಯಾಟ ಮತ್ತು ಮೂಡಲಪಾಯ)	ಸಂಪುಟ ೧೪ ಸಂಚಿಕೆ ೧೦ ಮಾರ್ಚ್ ೧೯೫೨
೫. ಜನಪದ ನಾಟ್ಯ ಗೀತೆಗಳು (ಮೂಡಲಪಾಯದ ಹಾಡುಗಳು)	ಸಂಪುಟ ೧೬ ಸಂಚಿಕೆ ೨ ಜುಲೈ ೧೯೫೩

೬	ಜನಪದ ಗೀತೆಗಳ ಛಂದಸ್ಸು (ಅಂಶಗಣದ ವಿವರ)	ಸಂಪುಟ ೧೬ ಸಂಚಿಕೆ ೮ ಜನೇವರಿ ೧೯೫೪
೭	ಹಿಂದಿನ ಕಾಲದ ಹಳ್ಳಿಗಳು (ಹಳ್ಳಿಯ ಜೀವನ ಚಿತ್ರಣ)	ಸಂಪುಟ ೧೬ ಸಂಚಿಕೆ ೮ ಜನೇವರಿ ೧೯೫೪
೮.	ಕನ್ನಡ ಒಗಟುಗಳು	ಸಂಪುಟ ೧೭ ಸಂಚಿಕೆ ೧ ಜೂನ್ ೧೯೫೪
೯.	ಕನ್ನಡ ವಿನೋದ ವಿಲಾಸ (ಜನಪದ ಸಾಹಿತ್ಯದಲ್ಲಿ ವಿನೋದಗಳು)	ಸಂಪುಟ ೧೯ ಸಂಚಿಕೆ ೧೧ ಎಪ್ರೀಲ್ ೧೯೫೭

ಹೀಗೆ 'ಜಯಂತಿ'ಯಲ್ಲಿ ೧೯೩೦ ರಿಂದ ೧೯೫೭ ರವರೆಗೆ ಅತ್ಯಂತ ಮಹತ್ವದ ಲೇಖನಗಳನ್ನು ಪ್ರಕಟಿಸಿರುವರು. ಇವುಗಳಲ್ಲಿ ಕೆಲವು ಲೇಖನಗಳು ಅನಂತರದ ಕಾಲಾವಧಿಯಲ್ಲಿ ಸಂಕಲನಗೊಂಡು, ಗ್ರಂಥ ರೂಪತಾಳಿವೆ. ಇದೇ ರೀತಿ ಜನಪದ ರಂಗಭೂಮಿ ಕುರಿತು ಅನೇಕ ಲೇಖನಗಳನ್ನು ಅವರು 'ಜಯಂತಿ'ಯಲ್ಲಿ ಪ್ರಕಟಿಸಿದ್ದರು. ಅವರ ಬರವಣಿಗೆಯ ಹಿಂದೆ ನಮ್ಮ ಜನಪದರ ಪರಂಪರಾಗತ ಬದುಕು, ಅವರ ಹಿಂದಿರುವ ಆದರ್ಶಗಳನ್ನು ಬಿಂಬಿಸುವ ಉದ್ದೇಶವಿದೆ.

ಬದಲಾದ ಸಂದರ್ಭದಲ್ಲಿಯೂ ಜಾನಪದ ಅಧ್ಯಯನದ ಅವಶ್ಯಕತೆಯನ್ನು ಅವರು ಪ್ರತಿಪಾದಿಸಿದ ರೀತಿ ತುಂಬಾ ಮಾರ್ಮಿಕವಾಗಿದೆ. 'ಒಂದೊಂದು ಕಾಲದ ಜನಾಭಿರುಚಿ, ಒಂದೊಂದು ಬಗೆಯ ಸಂಸ್ಕೃತಿಯನ್ನು ಸೃಷ್ಟಿಸುವುದು, ಹೊಸ ಸಂಸ್ಕೃತಿ ಹಳೆಯ ಸಂಸ್ಕೃತಿಯ ಸತ್ತ್ವ ಬಲಗಳ ನೆರವಿನಿಂದಲೇ ನಿರ್ಮಾಣವಾಗಿರುವುದು'. ಕನ್ನಡಿಗರ ಧೈರ್ಯ, ಕೆಚ್ಚು ಹಾಗೂ ಸಂಸ್ಕೃತಿಗಳನ್ನು ಈಗಿನ ಯುವ ಪೀಳಿಗೆ

ಜನಪದ ಕಥೆಗಳ ಮೂಲಕ ಅರಿತುಕೊಳ್ಳಬೇಕು ಎಂಬುದು ಬೆಟಗೇರಿಯವರ ಅಪೇಕ್ಷೆಯಾಗಿತ್ತು.

ಹಿಂದಿನ ಕಾಲದ ಹೋಳಿಗೆ, ಕಡಬು, ಉಂಡಿಗಳು ಮರೆಯಾಗಿ ಅವುಗಳ ಸ್ಥಾನದಲ್ಲಿ ಕೇಕ್, ಬಿಸ್ಕತ್, ಬ್ರೆಡ್ ಮೊದಲಾದ ಹೊಸಬಗೆಯ ತಿನಿಸುಗಳು ನಮಗೆ ಪ್ರಿಯವೆನಿಸಬಹುದು. ಆದರೆ ಈ ಹೊಸ ಮಾದರಿಯ ತಿನಿಸುಗಳಿಗೂ ಹಳೆಯ ಮೂಲ ವಸ್ತುವಿನ ಅಗತ್ಯವೇ ಇದೆ ಎಂಬುದನ್ನು ನಾವು ಮರೆಯಲಾಗದು (ಸಾಹಿತ್ಯ ವಿಹಾರ ಪು. ೧೫೨). ಎಂತಹ ಕ್ರಾಂತಿಯ ಜೀವನ ಸಿದ್ಧಿಗೂ ಭೂತಕಾಲದ ಇತಿಹಾಸದ ಅಗತ್ಯ ಇದ್ದೇ ಇರುತ್ತದೆ. ಕನ್ನಡ ಜನಪದ ಸಾಹಿತ್ಯ ತನ್ನವರಿಗೆ ಅಂತಹ ಇತಿಹಾಸವನ್ನು ಖಂಡಿತವಾಗಿ ಹೇಳಿಕೊಡಬಲ್ಲದು.

ಎಲ್ಲ ಶಾಸ್ತ್ರಗಳಿಗೂ ಬೇಕಾದ ಶಕ್ತಿಯನ್ನು ನೀಡಬಲ್ಲ ಜನಪದ ಸಾಹಿತ್ಯ, ಅನೇಕ ವಿಜ್ಞಾನಗಳಿಗೆ ಮೂಲಸ್ಥಾನದಲ್ಲಿ ನಿಲ್ಲುತ್ತದೆ ಎಂಬ ಬೆಟಗೇರಿಯವರ ಮಾತು ಇಂದಿಗೆ ಹೆಚ್ಚು ಪ್ರಸ್ತುತವೆನಿಸುತ್ತದೆ.

ಸಾಹಿತ್ಯವು ಸಾಗಿರುವ ದಾರಿ : ೧೯೬೧ ರಲ್ಲಿ ಈ ಗ್ರಂಥವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದ ಲೇಖನಗಳಲ್ಲದೆ, ೧) ಸಾಮಾನ್ಯರ ಸಾಹಿತ್ಯದ ಸ್ವರೂಪ ದರ್ಶನ, ೨) ಜಾನಪದ ವಿನೋದ ವಿಲಾಸ, ೩) ಜಾನಪದ ಸುಖ ಸಂಕಥಾ ವಿನೋದ, ೪) ಕನ್ನಡ ಜಾನಪದ ಕಥಾವಾಹಿನಿ ಎಂಬ ನಾಲ್ಕು ಲೇಖಗಳು ಜನಪದ ಸಾಹಿತ್ಯಕ್ಕೆ ಸಂಬಂಧಿಸಿವೆ.

ಸಾಮಾನ್ಯರ ಸಾಹಿತ್ಯದ ಸ್ವರೂಪದರ್ಶನ (ಜನಪದ ಸಾಹಿತ್ಯಾವಲೋಕನ) ಈ ವಿಭಾಗದ ಮೊದಲನೆಯ ಲೇಖನದಲ್ಲಿ ಜನಪದ ಸಾಹತ್ಯದ ವಿವರಣೆಯಿದೆ. ಜನಪದರಿಗೆ ಹೆಸರಿನ ಹಂಬಲ ಇರುವುದಿಲ್ಲ ಇದನ್ನು ಯಾರು, ಯಾವಾಗ, ಎಲ್ಲಿ ರಚಿಸಿದರು ಎಂಬುದು ಗೊತ್ತಾಗುವುದಿಲ್ಲ. ಇವುಗಳ ಒಡೆತನ ಜಾನಪದ (ದೇಶದ) ಒಡೆತನಕ್ಕೆ

ಸೇರಿದುದು. ಆದ್ದರಿಂದ ಇದನ್ನು 'ಜನಪದ ಸಾಹಿತ್ಯ' ಎಂದು ಕರೆಯುತ್ತಿರುವುದು ಎಂಬ ಈ ಮಾತುಗಳೂ ವಿಚಾರಣೀಯವಾಗಿವೆ. 'ಜಾನಪದ ವಿನೋದ ವಿಲಾಸ' ಎಂಬ ಎರಡನೆಯ ಲೇಖನದಲ್ಲಿ ಜನಪದ ಸಾಹಿತ್ಯ ರೂಪಗಳಾದ ಗದ್ಯ ಪದ್ಯ ಮತ್ತು ದೃಶ್ಯ ರೂಪಗಳಲ್ಲಿ ವ್ಯಕ್ತವಾದ ಹಾಸ್ಯವನ್ನು ಕುರಿತು ವಿವರವಾಗಿ ವಿವರಿಸಲಾಗಿದೆ.

'ಜಾನಪದ ಸುಖ ಸಂಕಥಾ ವಿನೋದ' ಎಂಬ ಮೂರನೆಯ ಲೇಖನದಲ್ಲಿ ಒಗಟಿನ ಮೂಲ ಹಾಗೂ ಅದರ ರೂಪನಿಷ್ಪತ್ತಿ ಕುರಿತು ಚರ್ಚೆ ಮಾಡಲಾಗಿದೆ. ಇದಕ್ಕೆ ಪರ್ಯಾಯವಾಗಿ ಪ್ರೌಢ ಸಾಹಿತ್ಯದಲ್ಲಿ ಬೆಡಗು ಮುಂಡಿಗೆ, ಪ್ರಶ್ನೋತ್ತರ ಪದ್ಯ ಬೆಳೆದು ಬಂದಿರುವುದನ್ನು ವಿವರಿಸಲಾಗಿದೆ. 'ಕನ್ನಡ ಜನಪದ ಕಥಾ ವಾಹಿನಿ' ಎಂಬ ಕೊನೆಯ ಲೇಖನದಲ್ಲಿ ೧) ಚಿಕ್ಕಮಕ್ಕಳ ಕಥೆಗಳು ೨) ಜಾನಪದ ಐತಿಹಾಸಿಕ ಕಥೆಗಳು ೩) ಜೋಗಿ–ಗೊಂದಲಿಗರ ಕಥೆಗಳು ಎಂಬ ವಿಭಾಗ ಮಾಡಿ ವಿವರಿಸಿದ್ದಾರೆ. ಸಾಹಿತ್ಯದ ಸರಿಯಾದ ಅಭ್ಯಾಸ ಮಾಡಬೇಕೆನ್ನುವವರಿಗೆ ಅತ್ಯುತ್ತಮ ಪ್ರವೇಶಿಕೆ ಇದಾಗಿದೆ.

ನಮ್ಮ ಸಂಸ್ಕೃತಿ ಪರಂಪರೆ : ೧೯೬೯ ರಲ್ಲಿ ಪ್ರಕಟಿಸಿದ 'ನಮ್ಮ ಸಂಸ್ಕೃತಿ ಪರಂಪರೆ' ಅತ್ಯಂತ ಉಪಯುಕ್ತ ಗ್ರಂಥ. ಚೈತ್ರಮಾಸದಿಂದ ಫಾಲ್ಗುಣ ಮಾಸದವರೆಗಿನ ಹನ್ನೆರಡು ತಿಂಗಳುಗಳಲ್ಲಿಯ ಸಾಂಸ್ಕೃತಿಕ, ಸಾಂಪ್ರದಾಯಿಕ ನಡೆಯ ವೈವಿಧ್ಯವನ್ನು ಶಿಷ್ಟ ಮತ್ತು ಜನಪದ ಮೂಲಗಳ ಸಹಾಯದಿಂದ ಚಿತ್ರಿಸಿರುವ ಹನ್ನೆರಡು ಪ್ರಬಂಧಗಳ ಒಂದು ಕಟ್ಟು. ಈ ಗ್ರಂಥದ ಜೀವಾಳ : ಕರ್ನಾಟಕದ ಸಾಂಸ್ಕೃತಿಕ ಪರಂಪರೆಯಲ್ಲಿಯ ವಿಶಿಷ್ಟತೆಯ ದೀಪಸ್ತಂಭಗಳಂತಿರುವ 'ಕರ್ನಾಟಕದಲ್ಲಿ ವಸಂತೋತ್ಸವ', 'ಶಮೀ ಸಂಕೇತ', 'ನಾಡಹಬ್ಬ' ಕುರಿತು ಮೂರು ಪ್ರಬಂಧಗಳು ಈ ಗ್ರಂಥಕ್ಕೆ ವಿಶೇಷ ಕಳೆತಂದಿವೆ.

ಕರ್ನಾಟಕದಲ್ಲಿ ವಸಂತೋತ್ಸವ : ಇದರಲ್ಲಿ ವಸಂತೋತ್ಸವದ

ಪ್ರಾಚೀನತೆಯನ್ನು ಕುರಿತು ಚರ್ಚಿಸಿದ್ದಾರೆ. ಜೊತೆಗೆ ವಸಂತೋತ್ಸವದಲ್ಲಿ ಓಕಳಿ (ಕೆಂಪು ಬಣ್ಣದ) ಎರಚಾಟದ ಹಿನ್ನೆಲೆಯ ವಿಚಾರಗಳಿವೆ. ಡಾ. ಬೆಟಗೇರಿಯವರು ಕನಕದಾಸರ ಕಾವ್ಯದ ಆಧಾರದಿಂದ ಅಂದು ವಸಂತೋತ್ಸವ ಹೇಗೆ ಜರಗುತ್ತಿತ್ತು ಎಂಬುದರ ಕಲ್ಪನೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ಒಟ್ಟಿನಲ್ಲಿ ಪ್ರಸ್ತುತ ಪ್ರಬಂಧದಲ್ಲಿ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ಹೇಳಲಾಗಿದೆ.

ಕನ್ನಡ ಸಂಸ್ಕೃತಿಯ ಇನ್ನೊಂದು ವೈಶಿಷ್ಟ್ಯ 'ಶಮೀಸಂಕೇತ'. ಮಹಾನವಮಿಯ ಮರುದಿನ ವಿಜಯದಶಮಿ ಅಂದು ಬನ್ನಿಯನ್ನು ಪರಸ್ಪರ ವಿನಿಮಯ ಮಾಡಿಕೊಂಡು ಬಂಗಾರ ತೆಗೆದುಕೊಂಡು ಬಂಗಾರದಂತಿರೋಣ ಎಂಬುದಾಗಿ ಹಾರೈಸುವುದುಂಟು. ಆದರೆ 'ಬನ್ನಿ' ಬಂಗಾರ ಹೇಗೆ ಅನ್ನಿಸಿಕೊಂಡಿತು? ಬನ್ನಿಗೆ ಇಷ್ಟೊಂದು ಮಹತ್ವ ಏಕೆ? ಮುಂತಾದ ಪ್ರಶ್ನೆಗಳಿಗೆ ಉತ್ತರ ಕೊಡುವುದೇ ಈ ಪ್ರಬಂಧದ ಉದ್ದೇಶವಾಗಿದೆ.

ಕೊನೆಯ ಪ್ರಬಂಧ 'ನಮ್ಮ ನಾಡ ಹಬ್ಬ'. ರಾಷ್ಟ್ರೀಯ ಹಬ್ಬಗಳಲ್ಲಿ ಕನ್ನಡಿಗರ ಚೇತನವನ್ನು ಬಡಿದೆಬ್ಬಿಸಿ ಅವರಲ್ಲಿ ಕರ್ತೃತ್ವ ಶಕ್ತಿಯನ್ನು ಜಾಗೃತಗೊಳಿಸಿದ ಹಬ್ಬವೆಂದರೆ 'ನಾಡಹಬ್ಬ' ಎಂದು ಸಾಬೀತುಪಡಿಸಿದ್ದಾರೆ.

ಸಾಹಿತ್ಯ ವಿಹಾರ (೧೯೮೧) ಎಂಬ ಇವರ ಗ್ರಂಥ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಗೊಂಡಿದೆ. ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗಿದ್ದ ಇಪ್ಪತ್ತೆರಡು ಲೇಖನಗಳನ್ನು ಆಯ್ದು ನಾಲ್ಕು ವಿಹಾರಗಳಲ್ಲಿ ವಿಭಜಿಸಿ ಸಂಕಲನಗೊಳಿಸಲಾಗಿದೆ. ಇದರಲ್ಲಿ ಮೂರನೆಯ ವಿಹಾರದಲ್ಲಿ ಮಾತ್ರ 'ಜಾನಪದಕ್ಕೆ ಸಂಬಂಧಿಸಿದ ಐದು ಪ್ರಬಂಧಗಳಿವೆ : ೧) ಜಾನಪದ ನಾಟಕ ನಡೆದು ಬಂದ ದಾರಿ ೨) ನಮ್ಮ ಜಾನಪದ ರಂಗಭೂಮಿ ೩) ದೊಡ್ಡಾಟಗಳು ೪) ಜಾನಪದ ನಾಟ್ಯಗೀತೆಗಳು ೫) ಜಾನಪದ ಶಿಶು ಸಾಹಿತ್ಯ ಮತ್ತು ಲಾವಣಿ ಸಾಹಿತ್ಯ.

'ಜಾನಪದ ನಾಟಕ ನಡೆದು ಬಂದ ದಾರಿ'ಯಲ್ಲಿ ಜನಪದ ನಾಟಕದ ಪ್ರಾಚೀನತೆ, ಆಟವಾಡುವ ದಾಸರು, ರಾಧಾನ ಆಟ, ಭಾಗವತ ಪಂಥ, ಗೊಂಬೆಯಾಟ, ಶ್ರೀಕೃಷ್ಣಪಾರಿಜಾತ, ಸಂಗ್ಯಾ-ಬಾಳ್ಯಾ' ಇತ್ಯಾದಿ ಅಧ್ಯಾಯಗಳಲ್ಲಿ ಜಾನಪದ ನಾಟಕದ ಇತಿಹಾಸವನ್ನು ಹೇಳಿದ್ದಾರೆ.

'ನಮ್ಮ ಜಾನಪದ ರಂಗಭೂಮಿ' ಎಂಬ ಎರಡನೆಯ ಲೇಖನದಲ್ಲಿ ಸೂತ್ರದ ಗೊಂಬೆಯಾಟ, ಚರ್ಮದ ಗೊಂಬೆಯಾಟ, ಯಕ್ಷಗಾನ, ಬಯಲಾಟಗಳ ವಿವರಗಳು ಇವೆ.

'ದೊಡ್ಡಾಟಗಳು' ಎಂಬ ಮೂರನೆಯ ಲೇಖನದಲ್ಲಿ ಜನಪದ ನಾಟ್ಯಪರಂಪರೆ ಮುಂದುವರೆದ ರೀತಿಯನ್ನು ವಿವರಿಸಲಾಗಿದೆ. ದಾಸರಾಟ, ರಾಧಾನ ಆಟದಲ್ಲಿಯೂ ರಾಧಾನ ಆಟ, ರೂಪಸಿಂಗನ ಆಟದಲ್ಲಿಯೂ ಹೇಗೆ ಪರಿವರ್ತನೆ ಆದವು ಎಂಬುದನ್ನು ಹೇಳಲಾಗಿದೆ. ಮೊದಲನೆಯ ಲೇಖನಕ್ಕೆ ಪೂರಕವಾಗಿ ಇನ್ನಷ್ಟು ವಿವರಗಳು ಇಲ್ಲಿವೆ. 'ಜಾನಪದ ನಾಟ್ಯಗೀತೆಗಳು' ಎಂಬ ನಾಲ್ಕನೆಯ ಪ್ರಬಂಧದಲ್ಲಿ ಮೂಡಲಪಾಯದ ಆಟಗಳಲ್ಲಿ ನಾಟ್ಯಗೀತೆಗಳ ಸ್ವರೂಪ ವೈಶಿಷ್ಟ್ಯಗಳ ಅಧ್ಯಯನವಿದೆ.

'ಜಾನಪದ ಶಿಶು ಸಾಹಿತ್ಯ ಮತ್ತು ಲಾವಣಿ ಸಾಹಿತ್ಯ' ಎಂಬ ಐದನೆಯ ಪ್ರಬಂಧದಲ್ಲಿ ಜನಪದ ಕಥೆ, ಜೋಗುಳ-ಲಾಲಿ, ಮಕ್ಕಳಾಟದ ಚುಟುಕುಗಳು ಇತ್ಯಾದಿ ಶಿಶು ಸಾಹಿತ್ಯದ ವಿವಿಧ ರೂಪಗಳನ್ನು ವಿವರಿಸಿದ್ದಾರೆ. ಈ ಐದು ಪ್ರಬಂಧಗಳಲ್ಲಿ ಜನಪದ ನಾಟಕ ರಂಗಭೂಮಿ, ಶಿಶುಸಾಹಿತ್ಯ, ಲಾವಣಿ ಮುಂತಾದವುಗಳಿಗೆ ಸಂಬಂಧಿಸಿದಂತೆ ಮುಕ್ತವಾಗಿ ಚರ್ಚಿಸಿದ್ದಾರೆ; ಉಪಯುಕ್ತ ಮಾಹಿತಿ ನೀಡಿದ್ದಾರೆ.

ಈ ಗ್ರಂಥದ ನಾಲ್ಕನೆಯ ವಿಹಾರದಲ್ಲಿ ಜಾನಪದ ಸಂಸ್ಕೃತಿಗೆ ಸಂಬಂಧಿಸಿದಂತೆ ೧) ಜಾನಪದ ಸಂಸ್ಕೃತಿ ೨) ನಮ್ಮ ಹಬ್ಬ-ಹುಣ್ಣಿಮೆಗಳು ೩) ಕಾರಹುಣ್ಣಿವೆ ೪) ಗುಡಿಯ ಹುಣ್ಣಿವೆ ಎಂಬ ನಾಲ್ಕು ಲೇಖನಗಳಿವೆ.

ಇವು ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಹಬ್ಬ-ಹರಿದಿನಗಳಿಗೆ ಇರುವ ಮಹತ್ವ ಅರಿತುಕೊಳ್ಳಲು ಸಹಾಯಕವಾಗಿವೆ.

ಗಾದೆಗಳ ಬಗ್ಗೆ ಪ್ರಸ್ತಾಪಿಸುತ್ತಾ 'ಕನ್ನಡ ಭಾಷೆಯಲ್ಲಿ ಇರುವಷ್ಟು ಗಾದೆ, ಇನ್ನಾವ ಭಾಷೆಯಲ್ಲಿ ಇರಬಹುದೇ ಎಂಬ ಸಂದೇಹವಾಗುವಷ್ಟು ಗಾದೆಗಳಿವೆ. ದುರ್ದೈವದ ಸಂಗತಿ ಎಂದರೆ ಸಾವಿರಾರು ವರ್ಷಗಳ ಹಿಂದೆ ಕನ್ನಡದವೇ ಆಗಿದ್ದು, ಅದೇ ಗಾದೆಗಳನ್ನು ಈಗ ಬೇರೆ ಭಾಷೆಯಿಂದ ಅನುವಾದವಾಗಿ ಪಡೆಯುತ್ತಿದ್ದೇವೆ.. ಪಂಪನ ಸುಪ್ರಸಿದ್ಧ ಗಾದೆಗಳಾದ 'ಬಡಿ ಗಂಡನಿಲ್ಲದೆ ಪಾಲಂ ಗಂಡಂ', 'ಜಾಣನ ಗೋಣಿ ಬರಿದು' ಇವು ಮಧ್ಯದಲ್ಲಿ ನಮ್ಮ ಬಳಕೆಯಿಂದ ನಿಂತುಹೋಗಿದ್ದು, ಹಿಂದೆ ಮರಾಠಿಯಿಂದ ಮತ್ತೆ ಕನ್ನಡಕ್ಕೆ ತಂದುಕೊಳ್ಳಬೇಕಾಯಿತು. ಉದಾಹರಣೆಗೆ:

'ಬಿಲ್ಲಿ ಘೀ ದೇಖಾ, ಬಡಗಾ ನಹೀ ದೇಖಾ'
'ಅತಿಶಾಹಣಾ ತಾ ಚಾ ಬೈಲ ರಿಕಾಮಾ'

ಜಾನಪದ ಸಮ್ಮೇಳನ (೧೯೭೧) : ಅನೇಕ ಸಭೆ-ಸಮ್ಮೇಳನಗಳಲ್ಲಿ ಬೆಟಗೇರಿಯವರು ಜನಪದ ಸಾಹಿತ್ಯದ ಹಿರಿಮೆಯನ್ನು ಕುರಿತು ಉಪನ್ಯಾಸ ನೀಡಿದ್ದಾರೆ. ಹರಪನಹಳ್ಳಿ ಜಾನಪದ ಸಮ್ಮೇಳನ, ೧೯೭೧ ರಲ್ಲಿ ನಾಗಮಂಗಲದಲ್ಲಿ ಜರುಗಿದ ಮೂರನೆಯ ಅಖಿಲಕರ್ನಾಟಕ ಜಾನಪದ ಸಮ್ಮೇಳನ ಮುಂತಾದವುಗಳನ್ನು ಹೆಸರಿಸಬಹುದು. ಆ ಸಂದರ್ಭದಲ್ಲಿ ಜನಪದ ಸಾಹಿತ್ಯ-ಸಂಸ್ಕೃತಿಗಳ ಹಿರಿಮೆ-ಗರಿಮೆಗಳನ್ನು ಕುರಿತು ಮಾಡಿದ ಭಾಷಣವು ಅಲ್ಲಿ ನೆರೆದ ಜನಸಮೂಹ ತಲೆದೂಗುವಂತೆ ಮಾಡಿತು. ಆ ಮುದ್ರಿತ ಭಾಷಣವು ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತ ಕೈಪಿಡಿಯಾಗಿದೆ.

ಕ್ರಿ.ಶ. ೧೯೨೯ ರಲ್ಲಿ ಸಾಹಿತ್ಯ ಸಮ್ಮೇಳನ ಬೆಳಗಾವಿಯಲ್ಲಿ ಜರುಗಿತು. ಅಲ್ಲಿ ಬಿ.ಎಂ.ಶ್ರೀಕಂಠಯ್ಯನವರು ಉಪಸ್ಥಿತರಿದ್ದರು. ಆ ಸಂದರ್ಭದಲ್ಲಿ ಬೆಟಗೇರಿಯವರು ಜನಪದ ತ್ರಿಪದಿಗಳನ್ನು ಹಾಗೂ ಭಾವಗೀತೆಗಳನ್ನ

ಲಯಬದ್ಧವಾಗಿ ಹಾಡಿ, ಜನಪದ ಸೊಗಸನ್ನು ಹೊರಸೂಸಿದರು. ಆಗ ಬಿ.ಎಂ. ಶ್ರೀಕಂಠಯ್ಯನವರು ಬೆಟಗೇರಿಯವರನ್ನು ಮೆಚ್ಚಿಹೊಗಳಿದರು. ಅಲ್ಲದೆ ಜನಪದ ಸಾಹಿತ್ಯವನ್ನು ಬರೆದು ಜನತೆಗೆ ತೋರಿಸಲು ನಿವೇದಿಸಿಕೊಂಡರು.

ಬೆಟಗೇರಿ ಕೃಷ್ಣಶರ್ಮರ ಲಿಖಿತರೂಪದ ಜಾನಪದ ಕೊಡುಗೆಗಳಲ್ಲಿ ಅನೇಕ ವಿದ್ವಾಂಸರ ಜಾನಪದ ಕೃತಿಗಳಿಗೆ 'ಮುನ್ನುಡಿ' ಬರೆದು ಆ ಕೃತಿಯ ಹಿರಿಮೆಯನ್ನು ಹೆಚ್ಚಿಸಿರುವುದೂ ಸೇರಿವೆ. ಉದಾಹರಣೆಗೆ : ಎ. ಎಸ್. ಹೂಗಾರರ–'ಜಾನಪದ ನರಗುಂದ', ಮ. ಕೃಷ್ಣಮೂರ್ತಿ ಅವರ 'ಜನಪದ ಗೀತೆಗಳು', ಡಾ. ಲಿಂಗಣ್ಣ ಸಣ್ಣಕ್ಕಿ ಮತ್ತು ಶಿವಲಿಂಗಪ್ಪ ಭಾವಿಕಟ್ಟಿ ಅವರ 'ಜಾನಪದ ಕಿತ್ತೂರು' ಮುಂತಾದವುಗಳನ್ನು ಹೆಸರಿಸಬಹುದು. ಒಟ್ಟಿನಲ್ಲಿ ಬೆಟಗೇರಿಯವರು ಲಿಖಿತ ರೂಪದಲ್ಲಿ ಬರೆದುದಕ್ಕಿಂತ ಹೆಚ್ಚಾಗಿ ಮೌಖಿಕ ರೂಪದಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದೇ ಹೆಚ್ಚು.

ಕನ್ನಡ ಜಾನಪದ ಸಾಹಿತ್ಯ (೧೯೭೬) : ಬೆಟಗೇರಿ ಕೃಷ್ಣಶರ್ಮರ ಜಾನಪದ ಕೊಡುಗೆಯನ್ನು ಲಿಖಿತ ರೂಪದಲ್ಲಿ ಸ್ಪಷ್ಟವಾಗಿ ನಾವು ಗ್ರಹಿಸುವುದು ೧೯೭೬ ರಲ್ಲಿ ಕರ್ನಾಟ ವಿಶ್ವವಿದ್ಯಾಲಯದಿಂದ ಪ್ರಕಟವಾದ 'ಕನ್ನಡ ಜಾನಪದ ಸಾಹಿತ್ಯ'ವೆಂಬ ಹೆಸರಿನ ಗ್ರಂಥದಲ್ಲಿ. ಕಲಬುರ್ಗಿಯಲ್ಲಿ ಅವರು ನೀಡಿದ ಮೂರು ಉಪನ್ಯಾಸಗಳ ಲಿಖಿತರೂಪವೇ ಪ್ರಸ್ತುತ ಗ್ರಂಥ. ೧) ಜಾನಪದ ಸಾಹಿತ್ಯದ ವ್ಯಾಪ್ತಿ–ವೈವಿಧ್ಯ ಮತ್ತು ರೂಪ ವೈವಿಧ್ಯ ೨) ವಾಸ್ತವ ಜೀವನ–ಮಾನವೀಯ ಆದರ್ಶ (ಜಾನಪದ ಹಿನ್ನೆಲೆಯಲ್ಲಿ) ೩) ಜಾನಪದ ರಂಗಭೂಮಿ. ಈ ಮೂರು ಉಪನ್ಯಾಸಗಳು ಇಲ್ಲಿ ಸಂಕಲನಗೊಂಡಿವೆ. ಡಾ. ಬೆಟಗೇರಿ ಅವರ ಚಿಂತನಶೀಲತೆ, ವಿಷಯ ವಿಶ್ಲೇಷಣೆಯ ಪಾಂಡಿತ್ಯ ಮತ್ತು ಜನಪದ ಜೀವನದ ಪರಿವೀಕ್ಷಣೆಯ ಸೂಕ್ಷ್ಮತೆ ಇವುಗಳಿಗೆಲ್ಲ ಸಾಕ್ಷಿಯಾಗಿ ಈ ಮೂರು

ಪ್ರಬಂಧಗಳು ಮೂಡಿಬಂದಿವೆ. ಜಾನಪದ ಕ್ಷೇತ್ರಕ್ಕೆ ಬೆಟಗೇರಿಯವರಿಂದ ಸಂದ ಅತ್ಯುತ್ತಮ ಕೊಡುಗೆಯಿದು.

'ಜಯಕರ್ನಾಟಕ' ಹಾಗೂ 'ಜಯಂತಿ' ಪತ್ರಿಕೆಗಳ ಮೂಲಕ ಬೆಟಗೇರಿ ಕೃಷ್ಣಶರ್ಮರು ಜಾನಪದ ಕುರಿತು ತಮ್ಮ ನಿಲುವನ್ನು ಸಾಕಷ್ಟು ಹಿಂದೆಯೇ ಪ್ರಕಟಿಸಿದ್ದರು. ಗುಲ್ಬರ್ಗಾದಲ್ಲಿ ೧೯೭೭ ರಲ್ಲಿ ಮೂರು ಉಪನ್ಯಾಸಗಳನ್ನು ನೀಡುವುದರ ಮೂಲಕ ಮತ್ತೊಮ್ಮೆ ಅದಕ್ಕೆ ಚಾಲನೆ ನೀಡಿದರು. ಅವರು 'ಹಳ್ಳಿಯ ಸಾಹಿತ್ಯ', 'ಗ್ರಾಮೀಣ ಸಾಹಿತ್ಯ', ಪಾಮರ ಸಾಹಿತ್ಯ' ಎಂಬ ಪದಗಳಿಗಿಂತ 'ಜಾನಪದ ಸಾಹಿತ್ಯ'ವೆಂಬ ಶಬ್ದವೇ ಉಚಿತವಾದುದು ಎಂದು ಸಮರ್ಥಿಸಿದರು. ಜಾನಪದ ಸಾಹಿತ್ಯದ ಸ್ವರೂಪ, ರೂಪ, ವೈವಿಧ್ಯಗಳನ್ನು ತಿಳಿಸಿ-ಹೇಳುವ ಕೆಲಸವನ್ನು ಮೊದಲ ಉಪನ್ಯಾಸದಲ್ಲಿ ಮಾಡಿದ್ದಾರೆ. ಎರಡನೆಯ ಉಪನ್ಯಾಸದಲ್ಲಿ ಜಾನಪದರ ಧರ್ಮ, ದಾಂಪತ್ಯ ಜೀವನದ ಸರಸ-ವಿರಸಗಳು, ಜಾನಪದ ಸ್ತ್ರೀ ಜೀವನದ ಅಂತರಂಗದ ನೋಟಗಳು-ಇವುಗಳ ಶೋಧವಿದೆ. ಮೂರನೆಯ ಉಪನ್ಯಾಸ, ಜನಪದ ರಂಗಭೂಮಿಗೆ ಸಂಬಂಧಿಸಿದೆ. ಇಲ್ಲಿ ಲೇಖಕರು ಅನೇಕ ರಂಗಪ್ರಕಾರಗಳನ್ನು ಪರಿಚಯಿಸಿದ್ದಾರೆ. ಅವುಗಳಲ್ಲಿ ಕೆಲವು ಪ್ರಕಾರಗಳು ಈಗ ಅಸ್ತಿತ್ವದಲ್ಲಿಲ್ಲ. ಆದ್ದರಿಂದ ಈ ಕೃತಿ ಮಹತ್ವದ ದಾಖಲೆಯಾಗಿದೆ. ಪುರವಂತರ ಆಟ, ನಾಳ್ ಪಗರಣ, ಬೀದಿಗೊಟ್ಟ, ದಾಸರಾಟ, ರಾಧಾನ ಆಟ, ಸಂಗ್ಯಾ ಬಾಳ್ಯಾನ ಆಟ, ಶರಣರ ಆಟ, ಶ್ರೀಕೃಷ್ಣಪಾರಿಜಾತ, ಯಕ್ಷಗಾನ, ಮೂಡಲಪಾಯದ ಆಟಗಳು, ಸೂತ್ರದ ಬೊಂಬೆ ಆಟ, ತೊಗಲು ಗೊಂಬೆಯಾಟ-ಹೀಗೆ ಇಲ್ಲಿ ಸಮಗ್ರ ಕನ್ನಡ ಜನಪದ ರಂಗಭೂಮಿಯನ್ನೇ ಪರಿಚಯಿಸಲಾಗಿದೆ. ಜನಪದ ಸಾಹಿತ್ಯ ಹಾಗೂ ಜನಪದ ಕಲೆಗಳನ್ನು, ಕಲಾವಿದರನ್ನು ಕುರಿತು ಅವರಿಗಿರುವ ಜ್ಞಾನ ಅನುಭವಗಳನ್ನು ಗಮನಿಸಿದಾಗ ಬೆಟಗೇರಿಯವರನ್ನು 'ನಡೆದಾಡುವ ಕನ್ನಡ ಜಾನಪದ ವಿಶ್ವಕೋಶ' ಎಂದು ಕರೆಯಬಹುದು. ಕೊನೆಯ

ಉಪನ್ಯಾಸದಲ್ಲಿ ಅವರು 'ಪಗರಣ–ಹಗರಣ' ಶಬ್ದಗಳನ್ನು ಕುರಿತು ಚರ್ಚಿಸಿರುವುದರ ಜೊತೆಗೆ 'ಗೊಟ್ಟ–ಬೀದಿಗೊಟ್ಟ'ಯ ಅರ್ಥ ಬೀದಿಯಲ್ಲಿ ಆಡಿ ತೋರಿಸುವ ಆಟವಾಗಿರಬೇಕೆಂದು ಅಭಿಪ್ರಾಯ ಹೊಂದಿದ್ದಾರೆ. ದಾಸರಾಟದಿಂದ ಮಹಾರಾಷ್ಟ್ರದ 'ತಮಾಷಾ' ಹುಟ್ಟಿಕೊಂಡು ಮುಂದೆ ರಾಧಾನಾಟಕ್ಕೆ ಪ್ರೇರಣೆ ನೀಡಿರಬೇಕು ಎಂಬ ಅಭಿಪ್ರಾಯವನ್ನು ತಾಳಿದ್ದಾರೆ. ಉತ್ತರ ಕರ್ನಾಟಕದ ಉತ್ತರ ಗಡಿಯಲ್ಲಿ ಕನ್ನಡ ಭಾಷೆಯನ್ನು ಶಾಶ್ವತವಾಗಿ ಉಳಿಸಿಕೊಂಡು ಬಂದುದೆಂದರೆ ಈ ಜನಪದ ಸಾಹಿತ್ಯವೇ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಗಡಿ ಭಾಗಗಳಲ್ಲಿ 'ಜನಪದ ಸಾಹಿತ್ಯ' ಕಲೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕಾದ ಅಗತ್ಯವನ್ನು ಇದರಿಂದ ಗುರುತಿಸಬಹುದು.

ಜನಪದ ರಂಗಭೂಮಿಯನ್ನು ರಂಜಿಸಿದ ಶುದ್ಧ ವಾಸ್ತವ ದೃಷ್ಟಿಯ ಪ್ರಕಾರವೆಂದರೆ 'ಸಂಗ್ಯಾ–ಬಾಳ್ಯಾ'. ಇದನ್ನು 'ಗೆಣತಿ–ಗೆಣ್ಯಾನ ಆಟ'ವೆಂದು ಕರೆದಿದ್ದಾರೆ. ಸಂಗ್ಯಾ–ಬಾಳ್ಯಾ ಕುರಿತು ಮೂಲದ ಆಶಯಕ್ಕೆ ಧಕ್ಕೆ ಬರುವಂತಹ ಕೀಳುಅಭಿರುಚಿಯನ್ನು ಹುಟ್ಟಿಸುವಂತಹ ಬದಲಾವಣೆಗಳು ಅನಪೇಕ್ಷಿತ ಎಂದು ಸೂಚ್ಯವಾಗಿ ತಿಳಿಸಿದ್ದಾರೆ. ಅಲ್ಲದೆ ದುಂಡ್ಯಾ ಮೋವಿನ ಆಟ, ಸಾವುಕಾರನ ಆಟ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ ಆಟ, ಮನಮೋಹನ ಕುಶಲಾ, ಶರಣರ ಆಟ ಮುಂತಾದವು ಹುಟ್ಟಿ ಬೆಳೆದ ಪರಿಯನ್ನು ವೈಶಿಷ್ಟ್ಯಗಳನ್ನ ವಿವರಿಸಿದ್ದಾರೆ. ಅಪರಾಳ ತಮ್ಮಣ್ಣನ ಶ್ರೀಕೃಷ್ಣಪಾರಿಜಾತ ಕಥೆಯನ್ನು ಕುಲಗೋಡ ತಮ್ಮಣ್ಣ ವಿಶಿಷ್ಟ ಆಟವನ್ನಾಗಿ ಪರಿವರ್ತಿಸಿ ರಂಗಪ್ರಯೋಗ ಮಾಡಿದ ಎಂದು ಹೇಳಿ ಅದರ ವೈಶಿಷ್ಟ್ಯಗಳನ್ನು ಹೇಳಿದ್ದಾರೆ. ೧೯೦೭–೦೮ ರಲ್ಲಿ ಮೊದಲ ಸಲ 'ಪಾರಿಜಾತ ಆಟ'ವನ್ನು ನೋಡಿ ಸಂತೋಷಪಟ್ಟಿದ್ದ ಬೆಟಗೇರಿಯವರು ಇಂದು 'ಪಾರಿಜಾತ' ಆಟ ಎಂದು ರಂಗದ ಮೇಲೆ ಜೀವಿಸಿಕೊಂಡು ಬಂದಿರುವುದು ಮೂಲ ಪಾರಿಜಾತದ ಅಪಭ್ರಂಶ ರೂಪವೆಂದು

ಅಭಿಪ್ರಾಯಪಟ್ಟಿದ್ದಾರೆ. ಯಕ್ಷಗಾನ, ಬಯಲಾಟ, ಮೂಡಲಪಾಯ ಆಟ, ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ ಮುಂತಾದ ಜನಪದ ಕಲಾಪ್ರಕಾರಗಳ ವೈಶಿಷ್ಟ್ಯಗಳನ್ನು, ಅವುಗಳ ಸ್ವರೂಪವನ್ನು ವಿವರಿಸಿದ್ದಾರೆ.

ಹೀಗೆ ಬೆಟಗೇರಿ ಕೃಷ್ಣಶರ್ಮರಿಗೆ ಕನ್ನಡ ಜನಪದ ರಂಗಭೂಮಿಯ ಒಂದು ಸಮಗ್ರ ಕಲ್ಪನೆಯೂ ಪ್ರತಿಯೊಂದು ಪ್ರಕಾರದ ವಿಶಿಷ್ಟತೆ–ಅನನ್ಯತೆಗಳ ಸ್ಪಷ್ಟ ಚಿತ್ರಣವೂ ಇದ್ದುದು ನಮ್ಮ ತಿಳುವಳಿಕೆಗೆ ಬರುತ್ತದೆ.

ಡಾ. ಬೆಟಗೇರಿ ಕೃಷ್ಣಶರ್ಮರು ನೇರವಾಗಿ ಕನ್ನಡ ಜಾನಪದ ಕ್ಷೇತ್ರಕ್ಕೆ ಸೇನೆಸಲ್ಲಿಸಿರುವಂತೆ, 'ಆನಂದಕಂದರಾಗಿ' ಕವನ, ಕಥೆ ಮುಂತಾದ ಸೃಜನಾತ್ಮಕ ಸಾಹಿತ್ಯ ರಚಿಸುವಾಗಲೂ ಕನ್ನಡ ಜಾನಪದ ಕಾರ್ಯ ಮಾಡಿರುವುದು ಅವರ ವೈಶಿಷ್ಟ್ಯವೆಂದು ಹೇಳಬಹುದು. 'ಜನಪದ ಜೀವನ', 'ನಮ್ಮ ಬದುಕು' ಹಾಗೂ 'ಮಾತನಾಡುವ ಕಲ್ಲು' ಮುಂತಾದ ಅವರ ಸಾಹಿತ್ಯ ಕೃತಿಗಳನ್ನು ಹೆಸರಿಸಬಹುದು. ಸ್ಥಳ ಪುರಾಣ, ಐತಿಹ್ಯ ದಂತ ಕಥೆಗಳ ಬಳಕೆ ಇಲ್ಲಿಯ ಕಥೆಗಳಲ್ಲಿದೆ.

ಕನ್ನಡ ಜಾನಪದ ಜೀವನ ಪರಂಪರೆಯಲ್ಲಿ ನಾನು ಕಂಡಿರುವ ಸಾಂಸ್ಕೃತಿಕ ಕಥಾವಸ್ತುಗಳು ಅನೇಕ. ಹೇಗಾದರೂ ಮಾಡಿ, ಆ ವಸ್ತುಗಳನ್ನು ಇಂದಿನ ಕನ್ನಡಿಗರ ಮನದ ಮುಂದೆ ಇರಿಸಬೇಕೆಂಬ ಹಾರೈಕೆ ನನ್ನ ಭಾವನೆಗಳನ್ನು ಕುಣಿಸುತ್ತಲಿದ್ದಿತು. ಇಂದಿಗೆ ೨೫ ವರ್ಷಗಳ ಹಿಂದೆ ಮುಂಬಯಿ ಆಕಾಶವಾಣಿಯು ನನ್ನ ಈ ಕಥೆಗಳು ಒಂದೊಂದಾಗಿ ಬೆಳಕಿಗೆ ಬರುವಂತೆ ಉಪಕಾರ ಮಾಡಿತು.....ಹೀಗೆ ಆನಂದಕಂದರು 'ಮಾತನಾಡುವ ಕಲ್ಲು' ಪುಸ್ತಕಕ್ಕೆ ಬರೆದ ಪ್ರಸ್ತಾವನೆಯಲ್ಲಿ ತಮ್ಮ ಅನಿಸಿಕೆಗಳನ್ನು ದಾಖಲಿಸಿದ್ದಾರೆ.

ನಲ್ವಾಡುಗಳು : ಆನಂದಕಂದರ 'ನಲ್ವಾಡುಗಳು' ಒಂದು ಜನಪದ ಗೀತೆಗಳ ಸಂಕಲನವೆನ್ನುವಷ್ಟರ ಮಟ್ಟಿಗೆ ಜಾನಪದೀಯವಾಗಿದೆ.

'ಮಾತನಾಡುವ ಕಲ್ಲು' ಹಾಗೂ 'ನಲ್‌ವಾಡುಗಳು' ಶಿಷ್ಟತೆ ಮತ್ತು ಜಾನಪದೀಯತೆ ಬೇರ್ಪಡಿಸಲಾಗದಂತೆ ಸಮ್ಮಿಳನಗೊಂಡಿರುವುದನ್ನು ಮನಗಾಣಬಹುದು.

ಆನಂದಕಂದರ ವ್ಯಕ್ತಿತ್ವ : ಎತ್ತರವಿಲ್ಲದ ನಿಲುವು. ದುಂಡಗಿನ ಸಾದುಗಪ್ಪು ಮುಖ, ಅರ್ಧಬಿಳಿ ಅರ್ಧ ಕಪ್ಪು ಕೂದಲಿನ ಬರಿತಲೆ, ಶುಭ್ರ ಖಾದಿಯ ಪಂಚೆ, ಶುಭ್ರ ಖಾದಿಯ ಶರಟು, ಕೈಯಲ್ಲೊಂದು ಕಾಗದ ಪುಸ್ತಕಗಳ ಚೀಲ, ಚೀಲದಲ್ಲೊಂದು ನಾಶೀಪುಡಿ ಡಬ್ಬಿ, ಹಾದಿಯಲ್ಲಿ ಹೋಗುವಾಗ ಆಚೀಚೆ ಜೋಲಿ. ನೋಡಲಿಕ್ಕೇನೋ ಸಾಮಾನ್ಯ ವ್ಯಕ್ತಿ, ಕಲಿತಿದ್ದಾದರೂ ಕನ್ನಡ ಮುಲ್ಕಿ ಪರೀಕ್ಷೆ, ಹೇಗೆ ಏನೋನೋ ಲೆಕ್ಕಹಾಕಿ ಆ ವ್ಯಕ್ತಿಯೊಡನೆ ಸಾಹಿತ್ಯದಲ್ಲಿ ವಾದಕ್ಕಿಳಿದರೆ, ಕಾಲುತಪ್ಪಿ ಜೋಗದ ಜಲಪಾತದಲ್ಲಿ ಜಾರಿದಂತೆಯೇ! ವಿಷಯ ಪ್ರಾಚೀನ ಸಾಹಿತ್ಯ-ಸಂಸ್ಕೃತಿ ಸಂಪ್ರದಾಯಕ್ಕೆ ಸೇರಿದ್ದರಂತೂ ವರ್ಷಋತುವಿನಲ್ಲಿ ಮೈದುಂಬಿ ಹರಿಯುವ ಜಲಪಾತದ ಸೆಳವಿಗೆ ಸಿಕ್ಕಂತೆಯೇ. ಅಂತಲೇ ಶ್ರೀ ಬೆಟಗೇರಿ ಕೃಷ್ಣಶರ್ಮರೊಡನೆ ಮಾತನಾಡಬೇಕಾದರೆ ಎರಡು ಸಲ ವಿಚಾರಿಸಬೇಕು. ನಮ್ಮ ಸಾಹಿತ್ಯದ ಮಾತನ್ನು ಯಾರಾದರೂ ತಪ್ಪಿ ಬರೆದರೆ, ಸಂಸ್ಕೃತಿಯ ಅರ್ಥವನ್ನು ಅನರ್ಥ ಮಾಡಿದರೆ, ಅರಿಯದೆ ಸಂಪ್ರದಾಯವನ್ನು ಹಳಿದರೆ, ಆನಂದಕಂದರಿಗೆ ಅಮಿತ ಕೋಪ. ಅದನ್ನು ಖಂಡಿಸಿ ಆ ತಪ್ಪು ಮಾಡಿದವರ ಮುಖಕ್ಕೆ ಮಂಗಳಾರತಿಯನ್ನು ಹಿಡಿಯಲು ಸಿದ್ಧ (ಆನಂದಕಂದ ಪುಸ್ತಕದಲ್ಲಿ ಶ್ರೀ ಗೋವಿಂದಮೂರ್ತಿ ದೇಸಾಯಿ). ಶ್ರೀ ಗೋವಿಂದಮೂರ್ತಿ ದೇಸಾಯಿಯವರ ಮೇಲ್ಕಂಡ ಮಾತುಗಳು ಆನಂದಕಂದರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತವೆ.

ಹಿರಿಯ ಸಾಧನೆಗೆ ಮೆಚ್ಚಿಗೆ : ಡಾ. ಬೆಟಗೇರಿ ಕೃಷ್ಣಶರ್ಮರು ತಮ್ಮ ಬದುಕಿನ ಕಾಲಾವಧಿಯಲ್ಲಿ ಮಾಡಿದ ಹಿರಿಯ ಸಾಧನೆಯನ್ನು ನಾಡಿನ ಹಿರಿಯ ವಿದ್ವಾಂಸ ಚಿಂತಕರು ಮೆಚ್ಚಿಕೊಂಡು ಪ್ರಶಂಸಿಸಿದ್ದಾರೆ. ಜನಪದ

ಸಾಹಿತ್ಯ–ಸಂಸ್ಕೃತಿ ಕಲೆಗಳ ಬಗೆಗೆ ಅಪಾರ ಲೋಕಾನುಭವ ಹೊಂದಿದ ಆನಂದಕಂದರು ಅವನ್ನು ಹಳ್ಳಿಗರಿಗೆ ತಿಳಿಸಿ ಹೇಳುತ್ತಿದ್ದರು. ಅವರಲ್ಲಿರುವ ಅಪಾರವಾದ ಜಾನಪದ ಸರಕನ್ನು ಕಂಡು ಹಲಸಂಗಿಯ ಗೆಳೆಯರು ಮೆಚ್ಚಿಕೊಂಡಿದ್ದುಂಟು. ಬಿ.ಎಂ.ಶ್ರೀ, ಡಾ. ಆರ್. ಸಿ. ಹಿರೇಮಠ, ಡಾ. ಹಾ. ಮಾ. ನಾಯಕ, ಪ್ರೊ. ವಸಂತ ಕುಷ್ಟಗಿ, ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪ್ರೊ. ಜ್ಯೋತಿ ಹೊಸೂರು, ಡಾ. ಶಾಲಿನಿ ರಘುನಾಥ, ಡಾ. ಬಸವರಾಜ ಮಲಶೆಟ್ಟಿ, ಡಾ. ಶ್ರೀರಾಮ ಇಟ್ಟಣ್ಣವರ, ಡಾ. ಜಿ. ಶಂ. ಪರಮಶಿವಯ್ಯ, ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ, ಡಾ. ಎಂ. ಎಂ. ಕಲಬುರ್ಗಿ, ಎಂ. ಎಸ್. ಸುಂಕಾಪೂರ, ಡಾ. ಚಕ್ಕೆರೆ ಶಿವಶಂಕರ, ಎಸ್. ವಿ. ಶ್ರೀನಿವಾಸರಾವ್, ಡಾ. ನಿಂಗಣ್ಣ ಸಣ್ಣಕ್ಕಿ, ಡಾ. ಸಿ. ಕೆ. ನಾವಲಗಿ ಮುಂತಾದವರು ಈ ಹಿರಿಯರ ಹಿರಿಯ ಸಾಧನೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಆದರ್ಶ ಶಿಕ್ಷಕ, ಶ್ರೇಷ್ಠ ವಾಗ್ಮಿ, ಹಾಡುಗಾರ, ಪ್ರಗತಿಪರ ಚಿಂತಕ, ಸಂಶೋಧಕ, ಕವಿ, ಕಥೆಗಾರ, ಪತ್ರಿಕೋದ್ಯಮಿ ಎಲ್ಲಕ್ಕೂ ಮಿಗಿಲಾಗಿ ಜಾನಪದ ವಿದ್ವಾಂಸರಾಗಿ ತಮ್ಮ ವ್ಯಕ್ತಿ ವೈಶಿಷ್ಟ್ಯದಿಂದ ಕಂಗೊಳಿಸುತ್ತಿರುವ ಡಾ. ಬೆಟಗೇರಿ ಕೃಷ್ಣಶರ್ಮರು ಪ್ರಮುಖವಾಗಿ ಜನಪದ ಸಾಹಿತ್ಯಾಗಸದಲ್ಲಿ ಮಿನುಗುವ ನಕ್ಷತ್ರವಾಗಿದ್ದಾರೆ.

ಬೆಟಗೇರಿಯವರ ಕನಸು : 'ಜಾನಪದ ಕೋಶ'ದಂತಿದ್ದ ಆನಂದಕಂದರ ತಲೆಯಲ್ಲಿ ಜಾನಪದ ಕುರಿತಂತೆ ಹುದುಗಿದ್ದ ಅಪಾರ ಜ್ಞಾನದ ಸಾರದಲ್ಲಿ ಸ್ವಲ್ಪ ಭಾಗ ಮಾತ್ರ ಬರಹರೂಪದಲ್ಲಿ ಹೊರಬಂದಿದೆ. ಅವರು ಜಾನಪದ ಕುರಿತು ಬರೆದುದು ಕಡಿಮೆ, ಒರೆದುದು ಹೆಚ್ಚು. ಬರಹದ ರೂಪಕ್ಕಿಳಿಯದೇ ಅವರೊಂದಿಗೇ ಹೋದ ಅಪರಿಮಿತ ಜ್ಞಾನರಾಶಿಗೆ ನಾವು ಎರವಾಗಿದ್ದೇವೆ. ಉದಾಹರಣೆಗೆ : ವಿಜಯನಗರದ ಹಿನ್ನೆಲೆಯಲ್ಲಿ ಸುಮಾರು ೨೫ ಕಾದಂಬರಿಗಳನ್ನು ರಚಿಸುವ ಆಶಯ ಹೊಂದಿದ್ದರು. ಆದರೆ ಹಲವಾರು ವೈಯಕ್ತಿಕ ಅನಿವಾರ್ಯತೆಗಳಿಂದ (ಪಾರ್ಶ್ವವಾಯು ರೋಗಕ್ಕೆ ತುತ್ತಾಗಿ ಹಾಸಿಗೆ ಹಿಡಿದಿದ್ದರಿಂದ) ಅವು

ಹೊರಬರದಿರುವುದು ನಿಜಕ್ಕೂ ಕನ್ನಡಿಗರ ದೌರ್ಭಾಗ್ಯ. ಅವು ಹೊರಬಂದಿದ್ದರೆ ಅವರು ಚಾರಿತ್ರಿಕ ಕಾದಂಬರಿ ಕ್ಷೇತ್ರದ ಮೇರು ಪುರುಷರಾಗುತ್ತಿದ್ದರು.

ಆನಂದಕಂದರ ಜಾನಪದ ಕೊಡುಗೆಯನ್ನು ಈ ರೀತಿ ಗುರುತಿಸಬಹುದು :

೧. ಕನ್ನಡದಲ್ಲಿ ಜಾನಪದ ಅಭ್ಯಾಸ ಪ್ರಾರಂಭಿಸಿದ ಮೊದಲಿಗರಲ್ಲಿ ಬೆಟಗೇರಿ ಕೃಷ್ಣಶರ್ಮರೂ ಒಬ್ಬರು.

೨. ಪತ್ರಿಕೆಗಳಲ್ಲಿ ಲೇಖನ ಬರೆಯುವ ಮೂಲಕ ಜನಪದ ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, ಪ್ರಚಾರಕಾರ್ಯ ಕೈಕೊಂಡರು.

೩. ತಮ್ಮ ಅಗಾಧವಾದ ಜ್ಞಾಪಕಶಕ್ತಿ ಹಾಗೂ ಕಂಠಮಾಧುರ್ಯದಿಂದ ಜನಪದ ಹಾಡಿನ ಸವಿಯನ್ನು ಹೋದಲ್ಲೆಲ್ಲಾ ಹಂಚಿದರು. ಜನಸಾಮಾನ್ಯರಲ್ಲಿ ಜಾನಪದ ಕುರಿತು ಸದಭಿರುಚಿ ಬೆಳೆಸಿದರು.

೪. ಜನಪದ ರಂಗಭೂಮಿಯ ಸಮಗ್ರನೋಟವನ್ನು ನೀಡಿದವರಲ್ಲಿ ಮೊದಲಿಗರು. 'ಕೆರೆಗೆ ಹಾರ' ಕಥನಗೀತೆಯನ್ನು ಮೊದಲು ಸಂಗ್ರಹಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

೫. ಜಾನಪದವನ್ನು ಅಪ್ಪಟ ದೇಶೀ ಚಿಂತನೆಯ ಹಿನ್ನೆಲೆಯಲ್ಲಿ ಸಂಗ್ರಹ ಅಧ್ಯಯನ ಮಾಡಿರುವ ಬೆಟಗೇರಿ ಕೃಷ್ಣಶರ್ಮರ ಸಾಧನೆ-ಕೊಡುಗೆಗಳು ಜಾಗತೀಕರಣದ ಈ ಸಂದರ್ಭದಲ್ಲಿ ವಿಶೇಷ ಮಹತ್ವ ಪಡೆದುಕೊಳ್ಳುವುದರಲ್ಲಿ ಸಂದೇಹವಿಲ್ಲ.

ಸಮಾರೋಪ : 'ಆನಂದ ಕಂದ' ಕಾವ್ಯನಾಮದ ಬೆಟಗೇರಿ ಕೃಷ್ಣಶರ್ಮರು ಕನ್ನಡ ಜಾನಪದ ಕ್ಷೇತ್ರದಲ್ಲಿ ಮಾಡಿದ ಕಾರ್ಯ ವೈವಿಧ್ಯಪೂರ್ಣವೂ ಮೌಲಿಕವೂ ಆಗಿದೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯದ ಮೌಲ್ಯವನ್ನು ಕಂಡುಕೊಂಡ ಮೊದಲಿಗರಲ್ಲಿ ಅಗ್ರಗಣ್ಯರು.

ಇಂದು ಅತ್ಯಂತ ವಿಶಾಲ ಅರ್ಥದಲ್ಲಿ ಜಾನಪದ (Folklore)ವನ್ನು ಗ್ರಹಿಸಿ, ಅದರ ಅಭ್ಯಾಸ ಮಾಡಲಾಗುತ್ತಿದೆ. ಒಂದು ವಿಶಿಷ್ಟ ಮನೋಧರ್ಮವುಳ್ಳ ಜನಸಮೂಹದ ಜೀವನಕ್ಕೆ ಸಂಬಂಧಿಸಿದ ಸಾಹಿತ್ಯ, ಸಂಸ್ಕೃತಿ, ಕಲೆ, ನಂಬುಗೆ, ಮತ, ಆಚರಣೆ ಮಂತ್ರ, ಮಾಟ, ಔಷಧ, ಆಟ-ಪಾಠ, ಅಡಿಗೆ, ಉಡಿಗೆ-ತೊಡಿಗೆ ಮುಂತಾದ ಏನೆಲ್ಲವೂ ಈ ಜಾನಪದ ಪದದ ವ್ಯಾಪ್ತಿಯಲ್ಲಿ ಅಳವಡುತ್ತದೆ. ಈ ವಿಶಾಲ ವ್ಯಾಪ್ತಿಯ ಅರ್ಥ ಗ್ರಹಿಸಿಕೊಂಡು ಕರ್ನಾಟಕದಲ್ಲಿ ಅಧ್ಯಯನ ಪ್ರಾರಂಭವಾದುದು ೧೯೬೬ ರಿಂದ ಈಚೆಗೆ. ಆದರೆ ೧೯೫೦ ಕ್ಕಿಂತ ಮುಂಚೆಯೇ ಜಾನಪದದ ಈ ವಿಶಾಲ ವ್ಯಾಪ್ತಿಯ ಅರ್ಥ ಗ್ರಹಿಸಿಕೊಂಡಿದ್ದು, ಜನಪದ ಸಂಸ್ಕೃತಿ, ಐತಿಹ್ಯ, ಜನಪದ-ರಂಗಭೂಮಿ, ಜನಪದ ಜೀವನ ಇತ್ಯಾದಿ ವಿಷಯಗಳನ್ನು ಕುರಿತು ಜಯಂತಿ ಪತ್ರಿಕೆಯಲ್ಲಿ ೧೯೫೦ ಕ್ಕಿಂತ ಮುಂಚೆಯೇ ಕೆಲವು ಲೇಖನ ಬರೆದುದನ್ನು ಪರಿಶೀಲಿಸಿದಾಗ, ಆನಂದಕಂದರ ದೃಷ್ಟಿ, ಮುನ್ನೋಟದ ಅರಿವು ನಮಗಾಗುತ್ತದೆ.

ಅಲ್ಲದೆ ಹಲಸಂಗಿ ಗೆಳೆಯರ ಗುಂಪಿನಿಂದ ಗರತಿಯಹಾಡು, ಮಲ್ಲಿಗೆದಂಡೆ, ಜೀವನ ಸಂಗೀತ ಬರುವ ಪೂರ್ವದಲ್ಲಿಯೆ ಬೆಟಗೇರಿಯವರ ಕೆರೆಗೆಹಾರ ೧೯೨೨, ಬೀಸುವ ಕಲ್ಲಿನ ಹಾಡು ೧೯೨೮, ಹಳ್ಳಿಗರ ಹಾಡು ೧೯೩೦, ಬಂದಿರುವುದನ್ನು ನೋಡಿದರೆ ಬೆಟಗೇರಿಯವರೆ ಕರ್ನಾಟಕದಲ್ಲಿ ಜನಪದ ಸಾಹಿತ್ಯದ ಮೌಲ್ಯವನ್ನು ಕಂಡುಕೊಂಡ ಮೊದಲಿಗರು ಎನ್ನುವುದರಲ್ಲಿ ಎರಡು ಮಾತಿಲ್ಲ.

.ಕರ್ನಾಟಕ ಜಾನಪದ ಪರಿಷತ್ತಿನ ಪ್ರಕಟನೆಗಳು

೧. ಹಾಡಾನ ಬನ್ನಿ ದನಿಯೆತ್ತಿ ರೂ. ೧೦/–
೨. ದುಂಡ ಮಲ್ಲಿಗೆ ಹೂವ ಬುಟ್ಟೀಲಿ ಬಂದಾವ ರೂ. ೬೫/–
೩. ನಾಗ ಸಂಪದ ರೂ. ೧೦೦/
೪. ಮಲೆನಾಡ ವಾಲ್ಮೀಕಿ–ಎಚ್. ಎಲ್. ನಾಗೇಗೌಡ ರೂ. ೬೦/–
೫. ಎಸೆನ್ಷಿಯಲ್ಸ್ ಆಫ್ ಕರ್ನಾಟಕ ಫೋಕ್ ಲೋರ್ (ಇಂಗ್ಲಿಷ್) ಪ್ರೊ. ಎಚ್. ಎ. ರಾಮಕೃಷ್ಣ ಮತ್ತು ಎಚ್. ಎಲ್. ನಾಗೇಗೌಡ ರೂ. ೪೦೦/–
೬. ಕನ್ನಡ ಜಾನಪದ ಕೋಶ–ಪ್ರ.ಸಂ.– ಎಚ್. ಎಲ್. ನಾಗೇಗೌಡ ರೂ. ೩೭೯/–
೭. ದಿ. ಮ್ಯಾನ್ ಅಂಡ್ ಹಿಸ್ ಮಿಷನ್ (ಇಂಗ್ಲಿಷ್) ರೂ. ೫೦/–

ತ್ರೈವಾರ್ಷಿಕ ಜಾನಪದ ಯೋಜನೆ ಪುಸ್ತಕಗಳು

೮.	ಸಿರಿಚುಂಚನಗಿರಿ	ಸಂ. ಎಚ್. ಎಲ್. ನಾಗೇಗೌಡ	ರೂ. 100/–
9.	ಕನ್ನಡ ಜನಪದ ಕಥನ ಕಾವ್ಯಗಳು	ಸಂ. ಎಚ್. ಎಲ್. ನಾಗೇಗೌಡ	ರೂ. 100/–
10.	ಚಾರಿತ್ರಿಕ ಜನಪದ ಕಥನ ಕಾವ್ಯಗಳು	ಸಂ. ಎಚ್. ಎಲ್. ನಾಗೇಗೌಡ	ರೂ. 150/–
11.	ಕನ್ನಡ ಜನಪದ ಕಥೆಗಳು	ಸಂ. ಎಚ್. ಎಲ್. ನಾಗೇಗೌಡ	ರೂ. 150/–
12.	ರೋಗ ಜಾನಪದ	ಸಂ. ಪ್ರೊ. ಡಿ. ಲಿಂಗಯ್ಯ ಡಾ. ಚಕ್ಕೆರೆ ಶಿವಶಂಕರ್	ರೂ. 120/–

13.	ದೈವ ಜಾನಪದ	ಸಂ. ಪ್ರೊ. ಡಿ. ಲಿಂಗಯ್ಯ ಡಾ. ಚಕ್ಕೆರೆ ಶಿವಶಂಕರ್	ರೂ. 100/-
14.	ಸ್ಥಳ ನಾಮಗಳ ಅಧ್ಯಯನ	ಸಂ. ಪ್ರೊ. ಡಿ. ಲಿಂಗಯ್ಯ ಡಾ. ಚಕ್ಕೆರೆ ಶಿವಶಂಕರ್	ರೂ. 150/-

ಜನಪ್ರಿಯ ಜಾನಪದ ಪುಸ್ತಕಗಳು

ಪ್ರತಿ ಪುಸ್ತಕದ ಬೆಲೆ ರೂ. 10-00

15.	ಡಾ. ಸಿಂಪಿ ಲಿಂಗಣ್ಣ	ಡಾ. ಮ. ಗು. ಬಿರಾದಾರ
16.	ಮತಿಘಟ್ಟ ಕೃಷ್ಣಮೂರ್ತಿ	ಡಾ. ಹಂಪನಹಳ್ಳಿ ತಿಮ್ಮೇಗೌಡ
17.	ಗೊರೂರು ರಾಮಸ್ವಾಮಿ ಅಯ್ಯಂಗಾರ್	ಡಾ. ಸಿ. ಜಿ. ವೆಂಕಟಯ್ಯ
18.	ಬಾಳುವೆ ಮಾಡಿದರೆ ಬಾ ತಂಗಿ ಅಂದಾರು	ಪ್ರೊ. ಡಿ. ಲಿಂಗಯ್ಯ
19.	ಜ್ಯೋತಿಯೇ ಆಗು ಜಗಕೆಲ್ಲ	ಪ್ರೊ. ಡಿ. ಲಿಂಗಯ್ಯ
20.	ದಕ್ಷಿಣ ಕರ್ನಾಟಕದ ಜನಪದ ಕಲೆಗಳು	ಡಾ. ಚಕ್ಕೆರೆ ಶಿವಶಂಕರ್
21.	ಉತ್ತರ ಕರ್ನಾಟಕದ ಜನಪದ ಕಲೆಗಳು	ಡಾ. ಚಕ್ಕೆರೆ ಶಿವಶಂಕರ್
22.	ಕರಾವಳಿ ಕರ್ನಾಟಕ ಜನಪದ ಕಲೆಗಳು	ಡಾ. ಚಕ್ಕೆರೆ ಶಿವಶಂಕರ್
23.	ಕೊಡಗು ಜನಪದ ಕಲೆಗಳು	ಡಾ. ಚಕ್ಕೆರೆ ಶಿವಶಂಕರ್
24.	ಡಾ. ಬಿ. ಎಸ್. ಗದ್ದಗಿಮಠ	ಡಾ. ಸಿ. ಕೆ. ನಾವಲಗಿ
25.	ಗಾದೆ ಪಂ. ಹು. ಮ. ರಾಮಾರಾಧ್ಯ	ಪ್ರೊ. ಜಿ. ಅಶ್ವತ್ಥನಾರಾಯಣ
26.	ಪಿ. ಧೂಲಾ ಸಾಹೇಬ	ಶ್ರೀ ಕಾ. ಹು. ಬಿಜಾಪುರ
27.	ನಾಡೋಜ ಎಚ್. ಎಲ್. ನಾಗೇಗೌಡ	ಡಾ. ಚಕ್ಕೆರೆ ಶಿವಶಂಕರ್
28.	ಜನಪದ ವೃತ್ತಿಗಾಯಕರು	ಡಾ. ಚಕ್ಕೆರೆ ಶಿವಶಂಕರ್
29.	ವಿಜಾಪುರ ಜಿಲ್ಲೆಯ ಜನಪದ ಕಲೆ-ಕಲಾವಿದರು (ರೂ. 15)	ಡಾ. ಎಂ. ಎನ್. ವಾಲಿ

30.	ಜನಪದ ಜಾಣ ಗಣಿತ	ಜೀನಹಳ್ಳಿ ಸಿದ್ಧಲಿಂಗಪ್ಪ
31.	ಡಾ. ಎಂ. ಎಸ್. ಲಠ್ಠೆ	ಡಾ. ವೀರಣ್ಣದಂಡೆ
32	ಜನಪದ ರಂಗಭೂಮಿ	ಡಾ. ಚಕ್ಕೆರೆ ಶಿವಶಂಕರ್
33.	ಡಾ. ಜೀ.ಶಂ. ಪರಮಶಿವಯ್ಯ (ರೂ.15)	ಡಾ. ಡಿ. ಕೆ. ರಾಜೇಂದ್ರ
34.	ಜೀವ ಉಳಿಸುವ ಕಳೆಗಳು (ರೂ. 15)	ಶಾಂತಿನಾಯಕ
35.	ಆಣೆ ಪ್ರಮಾಣಗಳು (ರೂ. 15)	ಡಾ. ಸಿ. ಪಿ. ನಾಗರಾಜ
36.	ಜಾನಪದ ಜಂಗಮ– ಎಸ್. ಕೆ. ಕರೀಂಖಾನ್	ಪ್ರೊ. ಡಿ. ಲಿಂಗಯ್ಯ
37.	ಜನಪದ ಭಾಷಾ ಚಮತ್ಕಾರ	ಶ್ರೀ ಜೀನಹಳ್ಳಿ ಸಿದ್ಧಲಿಂಗಪ್ಪ
38.	ಡಾ. ಆರ್. ಸಿ. ಹಿರೇಮಠ	ಡಾ. ಸಿ. ಕೆ. ನಾವಲಗಿ
39.	ಡಾ. ಎಂ. ಎಸ್. ಸುಂಕಾಪುರ	ಡಾ. ಸಿ. ಕೆ. ನಾವಲಗಿ
40.	ಸ್ವಾತಂತ್ರ್ಯ ಸಂಗ್ರಾಮದ ಲಾವಣಿಗಳು	ಬಿ. ನೀಲಕಂಠಯ್ಯ
41.	ಸ್ವಾತಂತ್ರ್ಯ ಸಮರದ ಲಾವಣಿಗಳು	ಎನ್. ವಿಷಕಂಠರಾವ್
42.	ಡಾ. ಬೆಟಗೇರಿ ಕೃಷ್ಣಶರ್ಮ	ಡಾ. ರಾಜಶೇಖರ ಇಚ್ಚಂಗಿ
43.	ಅಬೆ ದುಬೊಆ	ಡಾ. ಬಿ. ಎಸ್. ತಲ್ವಾಡಿ
44.	ಬಿ. ಎಲ್. ರೈಸ್	ಡಾ. ಬಿ. ಎಸ್. ತಲ್ವಾಡಿ
45.	ಶಂ. ಬಾ. ಜೋಶಿ	ಡಾ. ರಾಜಶೇಖರ ಇಚ್ಚಂಗಿ
46.	ಡಾ. ದೇವೇಂದ್ರಕುಮಾರ ಹಕಾರಿ	ಡಾ. ಹರಿಲಾಲ್ ಪವಾರ್
47.	ಅರ್ಚಕ ಬಿ. ರಂಗಸ್ವಾಮಿ	ಕ್ಯಾತನಹಳ್ಳಿ ರಾಮಣ್ಣ

ಡಾ. ಬೆಟಗೇರಿ ಕೃಷ್ಣಶರ್ಮ

ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯಕೃಷಿ ಮಾಡಿದ ಬೆಟಗೇರಿ ಕೃಷ್ಣಶರ್ಮ (ಆನಂದ ಕಂದ)ರು ಜಾನಪದದಲ್ಲಿ ವಿಶೇಷ ಸಾಧನೆಗೈದು ಹೆಸರಾಗಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಅಧ್ಯಯನ, ಪ್ರಕಟಣೆಯಲ್ಲಿ ನಿರತರಾಗಿದ್ದರು. ಜನಪದ ಗೀತಗಾಯನ, ವ್ಯಾಖ್ಯಾನದ ಮೂಲಕ ಜನಪದ ಪ್ರಚಾರಕಾರ್ಯ ಮಾಡಿದರು. 'ಕೆರೆಗೆ ಹಾರ'ದಂತಹ ಅರ್ಥಪೂರ್ಣ ಕಥನಕಾವ್ಯವನ್ನು ಮೊದಲು ಸಂಗ್ರಹಿಸಿದರು. ಸಾಹಿತ್ಯ ಸಮ್ಮೇಳನ ಮುಂತಾದ ಕಡೆ ಜನಪದ ಸಾಹಿತ್ಯದ ಸೊಗಸನ್ನು ಕೊಂಡಾಡಿದರು. ಜನಪದ ಸಾಹಿತ್ಯವನ್ನು ಕುರಿತು ಪತ್ರಿಕೆಗಳಲ್ಲಿ ಉಪಯುಕ್ತ ಲೇಖನಗಳನ್ನು ಬರೆದರು. ಸ್ವಂತ ಕವಿತೆಗಳನ್ನೂ ಜನಪದ ಧಾಟಿಯಲ್ಲಿ ಬರೆದು ಸಂತೋಷಿಸಿದರು. ಅವರದೇ ಆದ ರೀತಿಯಲ್ಲಿ ಕ್ಷೇತ್ರ ಕಾರ್ಯ ಮಾಡಿದರು. ಜನಪದ ಸಾಹಿತ್ಯದ ಜೊತೆಗೆ ಜನಪದ ರಂಗಭೂಮಿಯನ್ನು ತಮ್ಮ ಅಧ್ಯಯನಕ್ಕೆ ದುಡಿಸಿಕೊಂಡರು. ನಮ್ಮ ಸಂಸ್ಕೃತಿ ಪರಂಪರೆಯ ಬಗೆಗೆ ಹೊಸ ಹೊಳಹುಗಳನ್ನು ನೀಡಿದರು.

ಡಾ. ರಾಜಶೇಖರ ಇಚ್ಚಂಗಿಯವರು ಕನ್ನಡ ಪ್ರಾಧ್ಯಾಪಕರು. ವಿಮರ್ಶೆ, ಸಂಶೋಧನೆ, ವ್ಯಕ್ತಿಚಿತ್ರ, ಸಂಪಾದನೆ ಕ್ಷೇತ್ರಗಳಲ್ಲಿ ಮೌಲಿಕ ಗ್ರಂಥಗಳನ್ನು ಬರೆದು ಪ್ರಕಟಿಸಿರುವರು. ಶ್ರೀಯುತರು ಬೆಟಗೇರಿ ಕೃಷ್ಣಶರ್ಮರ ಬದುಕು ಬರಹವನ್ನು ಕುರಿತು ಪ್ರಾಮಾಣಿಕವಾಗಿ ಬರೆದಿದ್ದಾರೆ.

ಪ್ರೊ ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ. 1, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-560 054
janapadaparishath@hotmail.com